ನಭೆಯ ಕಾರ್ಯಕಲಾಪಗಳನ್ನು ಮುಂದುವರಿಸುವುದಕ್ಕೆ ಕಷ್ಟವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು.—ಈಗ ಚರ್ಚೆ ಮುಂದುವರಿಯಲಿ. ಈ ವಿಚಾರದ ಬಗ್ಗೆ ನಾನು ಮುಖ್ಯಮಂತ್ರಿಗಳ ಹತ್ತಿರ ಮಾತನಾಡುತ್ತೇನೆ.

Mysore Land Reforms (Amendment) Bill, 1972

Motion to Consider

(Debate Continued)

ಶ್ರೀ ಕೆ. ಎನ್. ವೀರಪ್ಪಗೌಡ (ಶ್ಯಾಗೇರಿ).—ಮಾನ್ಯ ಅಧ್ಯಕ್ಷರೇ, ನಾನು ನಿನ್ನೆ ಮಾತನ್ನಾಡುತ್ತ ಆಹಾರಧಾನ್ಯಗಳ ಕೊರತೆ ಯಾವ ಕಾರಣದಿಂದ ಪ್ರಾರಂಭವಾಗಿದೆ ಎಂದು ಹೇಳುವುದರಲ್ಲಿ ನಿಂತಿದ್ದೆ. ಈ ಹೊತ್ತು ಅದನ್ನು ಮುಂದುವರಿಸುವುದಕ್ಕೆ ಮೊದಲು ಕೆಲವರಿಗೆ ಭೂಮಿತಿಯ ವಿಷಯದಲ್ಲಿ ನಾನು ಯಾವ ಅಭಿಪ್ರಾಯದಲ್ಲಿದ್ದೇನೆ ಎನ್ನುವುದರ ಬಗ್ಗೆ ಖಚಿತವಾಗಿ ತಿಳಿದುಕೊಂಡಿಲ್ಲ ಎನ್ನುವ ಅನುಮಾನ ಬಂದಿರುವುದರಿಂದ ಅದರ ಬಗ್ಗೆ ಒಂದೆರಡು ಮಾತು ಹೇಳುತ್ತೇನೆ. ಪಂಜಾಬ್, ಹರಿಯಾಣ, ಪಶ್ಚಿಮ ಬಂಗಾಳ ಇಂಥ ಒಳ್ಳೆಯ ಜಮೀನು ಇರತಕ್ಕ ರಾಜ್ಯಗಳಲ್ಲಿ 18 ಎಕರೆ ಮಿತಿಯನ್ನು ಈಗಾಗಲೇ ಗೊತ್ತು ಮಾಡಿದ್ದಾರೆ ಎಂದು ತಿಳಿದುಕೊಂಡಿದ್ದೇನೆ. ನಾನು ಲೆಕ್ಕ ಹಾಕಿದಾಗ ಮೈಸೂರಿನಲ್ಲಿ ಅದಕ್ಕಿಂತಲೂ ಕಡಿಮೆ ಮಾಡಬೇಕಾಗಿತ್ತು. ಆದರೆ 18 ಎಕರೆಗೆ ಮೇಲೆ ಹೋಗತಕ್ಕ ಅವಕಾಶವಿಲ್ಲದೇ ಇರುವುದರಿಂದ ಈ ಹೊತ್ತು ನಾನು ಹೇಳುವುದು 18 ಎಕರೆಯಷ್ಟು ಎರಡು ಬೆಳೆ ಬರತಕ್ಕ ಜಮೀನು ಇರಬೇಕು ಮತ್ತು 50 ರಿಂದ 100 ಎಕರೆವರೆಗೆ ಖುಷ್ಕಿ ಜಮೀನಿರಬೇಕಾಗುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡತ್ತೇನೆ. ಆದರೆ ನಾನು ನಿನ್ನೆ ಹೇಳಿದ ಹಾಗೆ ಇದರ ಬಗ್ಗೆ ಪಕ್ಷವಾಲ್ಲಿ ಏನು ತೀರ್ಮಾನವಾಗುತ್ತದೆ ಅದಕ್ಕೆ ತಕ್ಕಬಾಗುತ್ತೇನೆ. ಈ ಕಾರಣದಿಂದ ಈ ಹೊತ್ತು ಈ ದೇಶದ ರೈತರು ಹಳ್ಳಿಯ ಮಟ್ಟದಲ್ಲಿ ಜೀವನ ನಡೆಸುವುದಕ್ಕೆ ಇಷ್ಟು ಬಹಳ ಅಗತ್ಯವೆಂದು ಒತ್ತಾಯಮಾಡಿ ಹೇಳುತ್ತೇನೆ. ಮಾನ್ಯ ಎಸ್. ಎಸ್. ಪಿ. ಯವರು ಕೆಲವು ವಿಷಯಗಳನ್ನು ಅಚ್ಚು ಹಾಕಿ ನಮ್ಮ ಕೈಗೆ ಕೊಟ್ಟಿದ್ದಾರೆ. ಅದರಲ್ಲಿ ಅನೇಕ ವಿಷಯಗಳನ್ನು ಅವರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ಕೂಡ ನಾನು ಮಾತನಾಡಬೇಕಾಗಿ ಬರುತ್ತದೆ.

[MR. DEPUTY SPEAKER in the Chair]

ಶ್ರೀ ಕಾಗೋಡು ತಿಮ್ಮಪ್ಪನವರು.—ಮೊದಲು ಒಂದು ಕಡೆ ಹೇಳಿದ್ದಾರೆ. ಒಂದು ಎಕರೆಗೆ 600 ರೂಪಾಯಿಗಿಂತ ಜಾಸ್ತಿ ಉತ್ಪತ್ತಿ ಬರುವುದಿಲ್ಲವಾದ್ದರಿಂದ ಗೇಣಿದಾರನಿಂದ ಜಮೀನು ಬಿಡಿಸಿಕೊಳ್ಳುವ ಮಟ್ಟ ಜಾಸ್ತಿ ಇಡಬೇಕು ಎಂದು ಹೇಳಿದ್ದಾರೆ. ಇನ್ನೊಂದು ಕಡೆ ಫ್ಯಾಮಿಲಿ ಹೋಲ್ಡಿಂಗ್, ಬೇಸಿಕ್ ಹೋಲ್ಡಿಂಗ್, ಕಡಿಮೆ ಮಾಡುತ್ತೇವೆ ಎಂದು ಹೇಳುತ್ತಾರೆ. ಅವರು ಮಾತನಾಡುವಾಗ ಕೆಲವು ಸಂದರ್ಭಗಳಲ್ಲಿ ನಕ್ಸಲ್‌ಬಾರಿಗಳು ಕೇಳುವ ರೀತಿಯಲ್ಲಿ ಹೇಳಿದ್ದಾರೆ. ನಕ್ಸಲ್‌ಬಾರಿಗಳು ಹೆಚ್ಚಾಗಿ ಕಲ್ಕತ್ತಾ ಮುಂತಾದ ದೊಡ್ಡ ದೊಡ್ಡ ಸಿಟಿಗಳಲ್ಲಿ ಇದ್ದಾರೆ. ಅವು ಸಿಟಿ ಏರಿಯಾದಲ್ಲಿರುವವರ ಬಗ್ಗೆ ಪ್ರಸ್ತಾಪ ಮಾಡಲಿಲ್ಲಾ. ಇನ್ನೊಂದು ಕಡೆ ಅವರು ಹೇಳುತ್ತಾರೆ ಕೈಯ್ಯಲ್ಲಿ ನೇಗಿಲ ಮೇಣಿ ಹಿಡದೇ ಇದ್ದವರಿಗೆ ಜಮೀನು ಏತಕ್ಕೆ ಎಂದು. ಈ ಜಮೀನಿನ ವ್ಯವಸಾಯದ ಬಗ್ಗೆ ಅವರಿಗೆ ಪೂರ್ತಿ ಗೊತ್ತಿದೆಯೇ ಇಲ್ಲವೊ ಗೊತ್ತಿಲ್ಲ. ಯಾವ ಗೇಣಿದಾರರೂ ಆಗಲಿ ಕೂಲಿ ಜನರನ್ನು ಇಟ್ಟುಕೊಂಡು ಕೆಲಸ ಮಾಡುತ್ತಾರೆ ಎನ್ನುವುದು ಅವರಿಗೆ ಗೊತ್ತಿಲ್ಲ. ಕೂಲಿ ಜನರನ್ನು ಇಟ್ಟುಕೊಂಡೇ ವ್ಯವಸಾಯ ಮಾಡಬೇಕು. ಬಾಯಿನಲ್ಲಿ ಬೇಕಾದ ಹಾಗೆ ಮಾತನಾಡಬಹುದು, ಕಾರ್ಯತಃ ಮಾಡಬೇಕಾದರೆ ಕಷ್ಟ ಇದೆ. ನಾವು ನಿಜವನ್ನೇ ಹೇಳಬೇಕೆಂದು ಇಲ್ಲಿ ಪ್ರಮಾಣವಚನವನ್ನು ಸ್ವೀಕರಿಸಿದ್ದೇವೆ. ಆದುದರಿಂದ ನಾನು ಇಲ್ಲಿ ನಿಜವಾದ ವಿಷಯವನ್ನೇ ಪ್ರಸ್ತಾಪ ಮಾಡಬೇಕಾಗುತ್ತದೆ. ಶ್ರೀಮಾನ್ ಕಾಗೋಡುತಿಮ್ಮಪ್ಪನವರು ಕೃಷಿಗಾರರು ಹೌದೋ ಅಲ್ಲವೋ ಅನ್ನುವುದನ್ನು ನಾನು ಒಪ್ಪಿಕೊಳ್ಳಬೇಕಾಗಿಲ್ಲ. ಅವರ ತಂದೆ ಕೃಷಿಗಾರರು. ಈಪೊತ್ತು ನಮ್ಮ ಹಳ್ಳಿಗಳಲ್ಲಿ ಕೃಷಿಗಾರರು ಏನು ಮಾಡುತ್ತಾರೆ ಎಂದರೆ ತಮ್ಮ ಮಕ್ಕಳು 6 ವರ್ಷ ಆಗುತ್ತಾ ಇದ್ದಹಾಗೇನೇ ಗಂಟಿ ಕಾಯುವುದಕ್ಕೆ ಹಾಕಿಕೊಳ್ಳುತ್ತಾರೆ, ನಂತರ 12 ವರ್ಷ ಆಗುತಾ

(ಶ್ರೀ ಕಾಗೋಡು ತಿಮ್ಮಪ್ಪ)

ಇದ್ದ ಹಾಗೆನೇ ಊಟಗೆ ಹಾಕಿಕೊಳ್ಳುತ್ತಾರೆ. ಆ ರೀತಿ ಇವರನ್ನೂ ಕೂಡ ಬೇಸಾಯಕ್ಕೆ ಹಾಕಿದ್ದರೆ ಈವೊತ್ತು ಅವರು ಅಡ್ವೋಕೇಟ್ ಆಗುವುದಕ್ಕೆ ಅವಕಾಶವಾಗುತ್ತಿರಲಿಲ್ಲಾ; ಅವರು ಸಾಗರದಲ್ಲಿ ಮನೆ ಕಟ್ಟಿಸುವುದಕ್ಕೆ ಆಗುತ್ತಿರಲಿಲ್ಲಾ, ಅವರು ಕಾಲೇಜಿನಲ್ಲಿ ಡಿಬೇಟ್ ಮಾಡುವುದಕ್ಕೆ ಆಗುತ್ತಿರಲಿಲ್ಲಾ, ಸಾರ್ವಜನಿಕರಲ್ಲಿ ಸೇರಿ ಭಾಷಣ ಮಾಡುವುದಕ್ಕೆ ಮತ್ತು ಈವೊತ್ತಿನ ದಿವಸ ಅಸೆಂಬ್ಲಿ ಮೆಂಬರ್ ಆಗಿ ಇಲ್ಲಿ ಬಂದು ಕೂತುಕೊಳ್ಳುವುದಕ್ಕೆ ಅವಕಾಶವಾಗುತ್ತಿರಲಿಲ್ಲ, ಮರ ಹತ್ತಿಕೊಂಡು ಬುಡಕತ್ತರಿಸಿ ತಾವು ಬೀಳುವ ಪ್ರಯತ್ನ ಮಾಡಬಾರದು, ಆ ರೀತಿ ಅವರನ್ನು ಬೇಸಾಯಕ್ಕೆ ಹಾಕಿದ್ದರೆ ಅವರು ಜಮೀನಿನ ಬೇಸಾಯ ಮಾಡಿಕೊಂಡೇ ಇರಬೇಕಾಗುತ್ತಿತ್ತು. ಆದುದರಿಂದ ಇವರು ಅಡ್ವೋಕೇಟ್ ಆಗಿರುವವರು ಅಡ್ವೋಕೇಟ್‌ರ ಮಕ್ಕಳು ಅಡ್ವೋಕೇಟಾಗಿ ಇರುತ್ತಾರೆ. ನನಗೆ ಜಮೀನಿನ ಅಗತ್ಯವಿಲ್ಲ ಎಂಬ ಈ ಮಾತು ಆಡಬಾರದು. ಈ ಜಮೀನಿನ ವಿಷಯವಾಗಲಿ ಅವರಿಗೆ ಏತಕ್ಕೆ ಬೇಕು ? ಜಮೀನಿನ ವಿಷಯದಲ್ಲಿ ಸ್ವಲ್ಪ ಅಸಡ್ಡೆ ರೂಪದಲ್ಲಿ ಚೆನೆಂಟ್ಸ್ ಬಗ್ಗೆಯೂ ಸೇರಿ ವ್ಯವಸಾಯಗಾರರ ಬಗ್ಗೆ ಸ್ವಲ್ಪ ತುಚ್ಛ ಮನೋಭಾವನೆಯಿಂದ ಮಾತನಾಡುವುದಕ್ಕೆ ಹೊರಟಿದ್ದಾರೆ ಎಂದು ನನಗೆ ಸಂಪೂರ್ಣವಾಗಿ ಅರ್ಥವಾಗುತ್ತದೆ. ಅವರಲ್ಲಿ ನಾನು ರಿಕ್ವೆಸ್ಟ್ ಮಾಡಿಕೊಳ್ಳುವುದು ಇಷ್ಟೆ. ಅವರು ದೊಡ್ಡ ಮನೋಭಾವನೆಯನ್ನು ಇಟ್ಟುಕೊಳ್ಳಬೇಕು. ನೀವು 3 ಜನ ಎಸ್.ಎಸ್.ಪಿ. ಯವರು ಈ ಸಭೆಗೆ ಬಂದಿದ್ದೀರಿ. ನೀವು 3 ಜನವೂ ಅಡ್ವೋಕೇಟ್ಸ್, ನೀವು ಟೌನ್‌ನಲ್ಲೇ ವಾಸವಾಗಿದ್ದೀರಿ. ಆದುದರಿಂದ ನಿಮಗೆ ಜಮೀನು ಏತಕ್ಕೆ ಇರಬೇಕು ಎಂದು ಕೇಳುವುದು ವಾಸ್ತವವಾಗಿದೆ. ಯಾರೂ ಕೂಡ ಕೂಲಿ ಜನರನ್ನು ನೇಮಕ ಮಾಡಿಕೊಳ್ಳದೆ ಕೆಲಸ ಮಾಡಬೇಕು ಎಂದು ಹೇಳುವುದಕ್ಕೆ ನಂತೋಷ ಪಡುತ್ತೇನೆ. ಆ ರೀತಿ ಹೇಳುವುದು ಸ್ವಾಭಾವಿಕ. ಆದರೆ ಈ ಬಗ್ಗೆ ಒಂದು ವಿಷಯ ಹೇಳುತ್ತೇನೆ. ನಾನು ನನ್ನ ಬಟ್ಟೆಗಳನ್ನು 3 ದಿವಸಕ್ಕೊಂದು ಸಾರಿ ಬದಲಾಯಿಸುತ್ತೇನೆ, ಅವರು ದಿನವೂ ಬದಲಾಯಿಸಬೇಕು, ಡೋಬಿಗೆ ಬಟ್ಟೆಕೊಟ್ಟು ಇಸ್ತ್ರಿ ಮಾಡಿಸಿ ದಿನವೂ ಹಾಕಿಕೊಳ್ಳಬೇಕು. ನೀವು ಅಡ್ವೋಕೇಟರು ಹಾಗೆಯೇ ಬರುವುದಕ್ಕಾಗುವುದಿಲ್ಲ. ನಿಜ. ಉಳುವವನಿಗೇ ಜಮೀನು ಇರಬೇಕು ಎಂದ ಮೇಲೆ ನೀವೇ ಬಟ್ಟೆ ಒಗೆದು ಇಸ್ತ್ರಿ ಮಾಡಿ ಹಾಕಿಕೊಳ್ಳಬೇಕೇ ಹೊರತು ಡೋಬಿಗೆ ಏತಕ್ಕೆ ಕೊಡಬೇಕು ? ಡೋಬಿಯನ್ನು ಇಟ್ಟುಕೊಳ್ಳಬಾರದು ಬಿಟ್ಟುಬಿಡಿ. ಲೆಜಿಸ್ಲೇಚರ್ ಹೋಂನಲ್ಲಿ ಆ ರೂಮುಗಳಲ್ಲಿ ಕರ್ಟನ್ ಹಾಕುವುದಕ್ಕೆ, ರಗ್ಗನ್ನು ಮಡಿಸಿ ಇಡುವುದಕ್ಕೆ ಇತ್ಯಾದಿ ಕೆಲಸಗಳಿಗೆ ರೂಮ್ ಬಾಯನ್ನು ಕರೆಯುತ್ತೀರಿ. ಅವರವರ ಕೆಲಸಗಳನ್ನು ಅವರವರೇ ಮಾಡಿಕೊಳ್ಳುವ ಹಾಗಿದ್ದರೆ ನಮಗೆ ರೂಮ್ ಬಾಯ್ ಏತಕ್ಕೆ ಬೇಕು ? ನಾನು ಮಾತ್ರ ನಾನೇ ಮಾಡಿಕೊಳ್ಳುತ್ತೇನೆ. ಹಾಗೆಯೇ ಯಾವುದಾದರೂ ಅಂಗಡಿಗೆ ಹೋಗಿ ನೋಡಿದರೆ ವ್ಯಾಪಾರ ಮಾಡುವವನೇ ಒಬ್ಬ, ಸಾಮಾನಿನ ದುಡ್ಡನ್ನು ತೆಗೆದುಕೊಳ್ಳುವವನೇ ಒಬ್ಬ ಆ ದುಡ್ಡಿನ ಪೆಟ್ಟಿಗೆಯನ್ನು ತೆಗೆದುಕೊಂಡು ಹೋಗುವವನೇ ಒಬ್ಬ ಇರುತ್ತಾನೆ. ಆ ವ್ಯಾಪಾರಸ್ಥರು ಅವರ ಕೆಲಸಗಳನ್ನು ಅವರೇ ಮಾಡಿಕೊಳ್ಳುವ ಹಾಗಿದ್ದರೆ ಇವರೆಲ್ಲಾ ಏತಕ್ಕೆ ಬೇಕು ? ಸಮಾಜವಾದದ ಸೂತ್ರ ಹೇಳತಕ್ಕಂಥ ನಿಮಗೆ ಈ ಸಾಕಾರ್ಯಗಳೆಲ್ಲಾ ಏತಕ್ಕೆ ಬೇಕು ಎಂದು ಕೇಳುತ್ತೇನೆ. ಶ್ರೀಮಾನ್ ಕಾಗೋಡು ತಿಮ್ಮಪ್ಪನವರಿಗೆ ಇದರಲ್ಲಿ ಎರಡು ತರಹ ಸಂಬಂಧ ಇದೆ ಎಂದು ನಾನು ಹೇಳುತ್ತೇನೆ. ಸಿಟಿಯ ನಂಟನ್ನು ಈಗತಾನೇ ಕಾಗೋಡ ತಿಮ್ಮಪ್ಪನವರು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ಬಗ್ಗೆ ಪ್ರಸ್ತಾಪ ಮಾಡಲಿಲ್ಲಾ. ಸೋಷಲಿಸ್ಟ್ ಪಾರ್ಟಿಯವರು ಪ್ರಿಂಟ್ ಮಾಡಿಸಿರತಕ್ಕಂಥ ಒಂದು ಹ್ಯಾಂಡ್ ಬಿಟ್ಸ್‌ನಲ್ಲಿ ಪೇಜ್ ನಂ 15 ರಲ್ಲಿ ಒಂದು ಕಡೆ ಈ ರೀತಿ ಹೇಳಿದ್ದಾರೆ :

> "ಹಿಡುವಳಿಯ ಗಾತ್ರ, ಕೃಷಿತಂತ್ರ, ಇಡೀ ಅರ್ಥ ವ್ಯವಸ್ಥೆಯಲ್ಲಿ ಕೃಷಿಯ ಸ್ಥಾನ ಈ ಎಲ್ಲವೂ ಕೃಷಿಯ ಪ್ರಗತಿಯಲ್ಲಿ ಹಾಸುಹೊಕ್ಕಾಗಿ ಹೊಸೆದುಕೊಂಡ ಅಂಶಗಳು. ಹಿಡುವಳಿಯ ಗಾತ್ರವೇ ಉತ್ಪಾದನೆಯ ಏಕಮೇವಾದ್ವಿತೀಯ ಕಾರಣ ಎಂದು ಸ್ವಾರ್ಥಿಗಳು ಅಥವಾ ಹುಂಬರು ಮಾತ್ರ ಹೇಳಬಹುದು. ಹಿಡುವಳಿಯ ಗಾತ್ರ ಚಿಕ್ಕದಾದರೂ ಇತರೆ ಅಂಶಗಳನ್ನು ಸರಿಯಾಗಿ ಅವರವರ ಯೋಗ್ಯತೆಗೆ ತಕ್ಕ ತೂಕದಂತೆ ಒದಗಿಸುವುದರಿಂದ ಉತ್ಪಾದನೆಯಲ್ಲಿ ಪ್ರಗತಿ ಸಾಧಿಸಬಹುದು. ಯಾವ ಯಾವ ಅಂಶಕ್ಕೆ ಎಷ್ಟು ಪ್ರಾಧಾನ್ಯ ಕೊಡಬೇಕೆಂದು ದೇಶದ ಮತ್ತು ಕಾಲಗಳನ್ನು ಅನುಸರಿಸಿ ನೈಜನಾತ್ಮಕವಾಗಿ ಪ್ರತಿ ದೇಶವೂ ತಾನೇ ನಿರ್ಧರಿಸಬೇಕಾದ ವಿಷಯ. ಈ ಕೆಲಸ ಎರವಲು ಬುದ್ಧಿಯ ನೇತೃತ್ವ ಮಾಡಬಾರದು, ಅಷ್ಟೇ ಅಲ್ಲ ಹಿಡುವಳಿಯ ಗಾತ್ರ ಹೆಚ್ಚಾದರೇ ಹೆಕ್ಟಾರುವಾರು ಉತ್ಪತ್ತಿ ಕುಗ್ಗುವುದು ಎಂಬುದಕ್ಕೆ ಕೂಡ ಅಧಾರವಿದೆ. ಉದಾಹರಣೆಗೆ ಹೆಕ್ಟಾರುವಾರು ಉತ್ಪತ್ತಿ ಭೂ ಹಿಡುವಳಿ ತುಂಬಾ ಹೆಚ್ಚು ಕಡಿಮೆ

ಇರುವ ಭಾರತ, ಮೆಕ್ಸಿಕೋ, ಅಮೇರಿಕಾವಲ್ಲಿ ಸರಿ ಸುಮಾರು ಒಂದೇ ಇದೆ. ಹಾಗಾದರೆ ಭೂ ಹಿಡುವಳಿಯನ್ನು ಹೇಗೆ ನಿರ್ಧರಿಸಬೇಕು ? ಇದು ತುಂಬಾ ಗೊಂದಲಕ್ಕೆ ಈಡಾಗಿರುವ ಪ್ರಶ್ನೆ.

ಭೂ ಹಿಡುವಳಿಯ ಗಾತ್ರ ನಿರ್ಣಯ ಸಾಮಾಜಿಕ ನ್ಯಾಯದ ಪ್ರಶ್ನೆ. ಹಿಡುವಳಿಯಿಂದ ಉತ್ಪಾದನೆ ಹೆಚ್ಚಿಸುವುದು ಯಥಾಯೋಗ ತಾಂತ್ರಿಕತೆಯ ಪ್ರಶ್ನೆ. ಭಾರತದಂತಹ ಜನ ಬಾಹುಳ್ಯ ಉಳ್ಳ ದೇಶದಲ್ಲಿ ಅದಷ್ಟು ಜನಕ್ಕೆ ಜೀವನೋಪಾಯ ಕಲ್ಪಿಸುವ ಜವಾಬ್ದಾರಿಯೊಡನೆ ಇದು ಹೆಣೆದುಕೊಂಡಿದೆ ಎಂದು ಹೇಳಿದ್ದಾರೆ.

ಇನ್ನೊಂದು ಕಪೆ ಪೇಜ್ ನಂಬರ್ 15 ರಲ್ಲಿ ಈ ರೀತಿ ಹೇಳಿದ್ದಾರೆ :—

" ಈ ಕಲ್ಪನೆಯ ಭೂ ಹಂಚಿಕೆ ಸಮಾಜದ ಇತರೆ ಕ್ಷೇತ್ರಗಳ ಸುಧಾರಣೆಗಳಿಗೂ ಹೊಂದಿಕೊಂಡಿರುತ್ತದೆ. ನಗರಗಳಲ್ಲಿಯೂ ಸುಲಿಗೆಗೆ ಎಡೆ ಇರಬಾರದು. ಏಕೆಂದರೆ ಸಣ್ಣ ಉದ್ಯಮಿಗಳ ವಿನಹ ಇತರ ಉದ್ಯಮಗಳು ರಾಷ್ಟ್ರೀಕರಣವಾಗುತ್ತದೆ. ಕೇವಲ ಭೂಸುಧಾರಣೆ ಮಾಡಿ ನಗರಗಳಲ್ಲಿ ಬಂಡವಾಳಗಾರಿಕೆ ಶೋಷಣೆ ಹಾಗೇಯೇ ಉಳಿಯಗೊಟ್ಟರೆ ಬಂಡವಾಳಗಾರಿಕೆಯ ಕಪಿಮುಷ್ಟಿಯನ್ನು ಹಳ್ಳಿಗಳಿಗೆ ಮತ್ತಷ್ಟು ಬಲವಾಗಿ ವಿಸ್ತರಿಸಿದಂತಾಗುತ್ತದೆ. ಮತ್ತು ಭೂಸುಧಾರಣೆಎಂದರೆ ಭೂಮಿತಿ ಎಷ್ಟೇ ಕಡಿಮೆ ಇದ್ದರೂ ಉಳಿಯುವ ಭೂಮಿಯು ಅತಿ ಕಡಿಮೆ. ಭೂಮಿ ಹೀನರೆಲ್ಲರಿಗೂ ಹಂಚುವಷ್ಟು ಬರುವುದಿಲ್ಲ. ಆದ್ದರಿಂದ ಭೂಸುಧಾರಣೆಯನ್ನು ಇತರ ಸುಧಾರಣೆಗಳೊಂದಿಗೆ ಹೊಂದಿ ಏಕಕಾಲದಲ್ಲಿ ಜಾರಿಗೆ ತರುವುದು ಮಾತ್ರ ಸಮಾಜವಾದ" ಎಂದು ಹೇಳಿದ್ದಾರೆ.

ಇದನ್ನು ಅವರು ಮರೆತಿದ್ದಾರೆ. ಇದರ ಬಗ್ಗೆ ಅವರು ಒತ್ತಾಯ ಮಾಡಿದ್ದರೆ ನನಗೂ ಸಂತೋಷವಾಗುತ್ತಿತ್ತು. ಏತಕ್ಕೆಂದರೆ ಈಪೊತ್ತು ಇದರಲ್ಲಿ ಪಕ್ಷಪಾತ ಇರಬಾರದು, ಸಮಾಜಕ್ಕೆ ನ್ಯಾಯ ಇರಬೇಕು ಎಂದು ಹೇಳುವಾಗ ಬೆಂಗಳೂರಿನಲ್ಲಿ 5-6 ಅಂತಸ್ತು ಇರುವ ಮನೆಗಳನ್ನು ಕಟ್ಟಿಕೊಂಡು ಅವರು ಒಂದು ಸಣ್ಣ ಮನೆಯಲ್ಲಿ ವಾಸವಾಗಿದ್ದು ತಿಂಗಳಿಗೆ 5-6 ಸಾವಿರ ರೂಪಾಯಿ ಬಾಡಿಗೆ ತೆಗೆದುಕೊಳ್ಳತಕ್ಕಂಥಾದ್ದು ಸರಿಯಲ್ಲ ಎಂದು ಹೇಳುತ್ತೇನೆ.

ಇನ್ನು ಫುಡ್ ಪ್ರಾಬ್ಲೆಮ್ಸ್ ವಿಚಾರವಾಗಿ ನಿನ್ನೆ ದಿವಸ ನನ್ನ ಭಾಷಣವನ್ನು ಅಪೂರ್ಣ ಮಾಡಿದ್ದೆ. ಅದನ್ನು ಈಗ ಮುಂದುವರಿಸುತ್ತೇನೆ. ಈಗ ನಮ್ಮ ಭಾಗದಲ್ಲಿ ಎರಡು ಬೆಳೆ ಆಗತಕ್ಕಂಥ ಭೂಮಿ ಇದ್ದರೂ ಕೂಡ ಈಗ ನಿಲ್ಲಿಸಿದ್ದಾರೆ. ಈಗ ಭೂಸುಧಾರಣೆ ಬರುತ್ತದೆ ಎಂದು ತಿಳಿದು ಈ ಜಮೀನಿನ ಉತ್ಪತ್ತಿ ವರ್ಷವೊಂದಕ್ಕೆ 6 ಸಾವಿರ ರೂಪಾಯಿ ಬರುವ ಹಾಗೆ ಮಾಡಿದರೆ ಹೆಚ್ಚು ಜಮೀನು ಸಿಕ್ಕುವುದಿಲ್ಲ ಎಂದು ಲೆಕ್ಕ ಹಾಕಿಕೊಂಡು ಇದನ್ನು ನಿಲ್ಲಿಸಿದರು. ಏತಕ್ಕೆಂದರೆ ವರ್ಷ ಒಂದಕ್ಕೆ ಒಂದು ಬೆಳೆ ಬರುವ ಜಮೀನು ಅದರೆ ಹೆಚ್ಚಿಗೆ ಜಮೀನು ಸಿಕ್ಕುತ್ತದೆ, ನಾವು ಎರಡು ಬೆಳೆ ಮಾಡಿದರೆ ಹೆಚ್ಚಿಗೆ ಇರತಕ್ಕಂಥ ಭೂಮಿಯನ್ನು ವಾಪಸ್ಸು ಪಡೆದುಕೊಳ್ಳುತ್ತಾರೆ ಎಂದು ತಿಳಿದು ಈ ರೀತಿ ಮಾಡಿದರು. ಇನ್ನೊಂದು ಕಾರಣ ಸಿಟಿಗಳಲ್ಲಿ ಒಬ್ಬನಿಗೆ 5-6 ಸಾವಿರ ರೂಪಾಯಿ ಬಾಡಿಗೆ ಬಂದರೂ ಅವರು ಹಾಗೆಯೇ ಇರಬೇಕು, ನಮಗೆ ಮಾತ್ರ ಒಂದು ಸೀಲಿಂಗ್ ಇಟ್ಟಿದ್ದಾರಲ್ಲಾ ಎನ್ನುವುದು ಒಂದು ಕಾರಣ. ಈ ಲ್ಯಾಂಡ್ ರೀಫಾರಂಸ್‌ನ್ನು ಜಾರಿಗೆ ಬಂದಿರುವುದರಲ್ಲಿ ಮುನ್ನ ಸ್ಟಾಂಡರ್ಡ್ ಎಕರೆ 27 ಎಕರೆ ಎಂದು ಇಟ್ಟಿದ್ದರು. ಮುಂದೆ ಮಾಡುವ ವರಿಗೆ 18 ಎಕರೆ ಅಂತ ಮಾಡಿದ್ದಾರೆ. ಈಗ ಕಾನೂನಿನಲ್ಲಿ ಹಿಂದಿನಿಂದ ಜಾರಿಗೆ ಬರಬೇಕು ಎಂತಿದೆ ಹೇಗೆ ಸಫಲವಾಗುತ್ತದೋ ಗೊತ್ತಿಲ್ಲ. ಇದನ್ನು ಜಾರಿಗೆ ತರುವ ಮುನ್ನ ಮೊದಲು ಯೋಜನೆ ಮಾಡಿ ಅನಂತರ ಜಾರಿಗೆ ತನ್ನಿ. ಈ ಭೂ ಸುಧಾರಣೆ ಜಾರಿಗೆ ಬರುವುದು ಸಂತೋಷ. ಆದರೆ ಈ ಸಮಾಜವಾದದ ಸುಧಾರಣೆಗಳನ್ನು ಜಾರಿಗೆ ತರುವಾಗ ದೇಶದ ಆರ್ಥಿಕ ಸ್ಥಿತಿಯನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ಸರ್ಕಾರದ ಖಜಾನೆಯಲ್ಲಿ ಕೊಟ್ಯಾಂತರ ರೂಪಾಯಿ ಇದ್ದರೂ ಕೂಡ ನಮ್ಮ ದೇಶ ಆರ್ಥಿಕವಾಗಿ ಬೆಳವಣಿಗೆ ಆಗದೇಕಾದರೆ ಜನರ ಆರ್ಥಿಕ ಸ್ಥಿತಿ ಉತ್ತಮಗೊಂಡರೆ ಮಾತ್ರ ದೇಶದ ಆರ್ಥಿಕ ಸ್ಥಿತಿ ಬೆಳವಣಿಗೆ ಆದರೆ ದೇಶದ ಜನತೆ ಎಲ್ಲರೂ ಕೂಡ ಸುಖ ಜೀವನ ಮಾಡಬಹುದು. ಈ ರೀತಿಯಾಗಿ ದೇಶದ ಆರ್ಥಿಕ ಸ್ಥಿತಿ ಒಂದು ಉತ್ತಮವಾದ ಪರಿಸ್ಥಿತಿಯಲ್ಲಿ ಇರುವುದಕ್ಕೆ ಅವಕಾಶ ಮಾಡಿಕೊಡಬೇಕು. ಈಪೊತ್ತು 18 ಎಕರೆ ಇರಬೇಕು ಎಂದು ತಂದಿದ್ದಾರೆ, ನಾಳೆ ಇನ್ನೊಂದು ಎಲೆ ನ್ ಬರುವ ಕಾಲದಲ್ಲಿ ಓಟು ಬೇಕಾಗುತ್ತದೆ ಎಂದು 18 ಎಕರೆ ಇದ್ದುದನ್ನು 5 ಎಕರೆ ಆದರೆ ಸಾಕು ಎಂದು ಹೇಳುವುದಾದರೆ ದೇಶದಲ್ಲಿ ಒಂದು ನಿಶ್ಚಿತ ನೀತಿ ಇಲ್ಲದೆ ಹೋದರೆ ದೇಶದ ಆರ್ಥಿಕ ಸ್ಥಿತಿ ಉತ್ತಮವಾಗುವುದಕ್ಕೆ ಅವಕಾಶವಾಗುವುದಿಲ್ಲಾ. ಈಗ ಇರತಕ್ಕ ಆಹಾರದ ಕೊರತೆಯನ್ನು ನಿಲ್ಲಿಸುವುದಕ್ಕೆ ಪ್ರಯತ್ನ ಮಾಡಬೇಕು. ಈಗ 18 ಎಕರೆ ಇರಬೇಕು

(ಶ್ರೀ ಕಾಗೋಡು ತಿಮ್ಮಪ್ಪ)

ನಿಶ್ಚಿತವಾಗಿ ಹೇಳಿದರೆ ಆ ರೈತನು ಬ್ಯಾಂಕುಗಳಲ್ಲಿ ಸಾಲ ಮಾಡಿ ಯಂತ್ರೋಪಕರಣಗಳನ್ನು ಕೊಂಡುಕೊಂಡು ಸಾಕಷ್ಟು ಬೆಳೆಯನ್ನು ಬೆಳೆಯಲು ಪ್ರಯತ್ನ ಮಾಡುತ್ತಾನೆ. ಅವನಿಗೆ ಪರ್ಮನೆಂಟ್ ವಾಟರ್‌ಸೋರ್ಸ್ ಇದ್ದರೂ ಕೂಡ ಈವೊತ್ತಿನ ದಿವಸ ಅವನು ಮಾಡುತ್ತಾ ಇಲ್ಲ. ಏತಕ್ಕೆಂದರೆ ಈವೊತ್ತು ಒಬ್ಬ ಮನುಷ್ಯನಿಗೆ 18 ಎಕರೆ ಇರಬೇಕು ಎಂದು ಹೇಳುತ್ತಾರೆ, ನಾಳೆ ದಿವಸ 5 ಎಕರೆ ಇರಬೇಕು ಎಂದು ಹೇಳುತ್ತಾರೆ ನಾವೇನಾದರೂ ಬ್ಯಾಂಕುಗಳಲ್ಲಿ ಸಾಲಸೋಲ ಮಾಡಿ ಯಂತ್ರೋಪಕರಣಗಳನ್ನು ಕೊಂಡುಕೊಂಡರೆ ಆ ಸಾಲಗಳನ್ನು ತೀರಿಸುವ ಬಗೆ ಹೇಗೆ ಎನ್ನು ಭಯ ಆ ರೈತನಿಗೆ ಬಂದಿದೆ. ಇನ್ನೊಂದು ಕಾರಣ ಏನೆಂದರೆ ನಾವು ಎರಡು ಬೆಳೆ ಬೆಳೆಯುವುದಾದರೆ ಈಗಿನ ಕಾನೂನಿನ ಪ್ರಕಾರ 2 ಬೆಳೆ ಬೆಳೆದರೆ ಇಷ್ಟು ಸ್ಟ್ಯಾಂಡರ್ಡ್ ಎಕರೆ ಇರಬೇಕು ಎಂತ ಏನು ಮಾಡಿದ್ದಾರೋ ಅದರಂತೆ ನಮಗೆ ಹೆಚ್ಚು ಜಮೀನು ಸಿಕ್ಕುವುದಿಲ್ಲ. ಅದರಿಂದ ಒಂದು ಬೆಳೆ ಮಾಡಿದರೆ ಹೆಚ್ಚು ಜಮೀನು ಸಿಕ್ಕುತ್ತದೆ ಎನ್ನುವುದು ಒಂದು. ನಮ್ಮ ಕಡೆ ರೈತರು ತಾತ್ಸಾರಿ ದೊರೆಯುವ ವಾಟರ್ ಅಸೈಲ ಬಲಟಿ ನೋಡಿಕೊಂಡು ಅತಿಸಿ 15 ಎಕರೆ ಏನಾದರೂ ಇದ್ದರೆ ಒಂದು ಸಾರಿ 10 ಎಕರೆ ಬೆಳೆ ಮಾಡಿ ಇನ್ನೊಂದು ಬೆಳೆ ಬೇಸಿಗೆ ಬೆಳೆ ಬೆಳೆಯಲು 5 ಎಕರೆ ಇಟ್ಟುಕೊಂಡು ಬೆಳೆ ಬೆಳೆಯುತ್ತಿದ್ದರು. ಈಗಿನ ಭೂಸುಧಾರಣೆಯಿಂದ ಸರ್ಕಾರದಲ್ಲಿ ನ್ಯಾಯ, ಧರ್ಮ ಸಿಕ್ಕುವುದಿಲ್ಲ ಎಂದು ತಿಳಿದು ಎರಡು ಬೆಳೆ ಬೆಳೆಯುವುದನ್ನು ನಿಲ್ಲಿಸಿದರು. ಅದೇ ಕಾರಣದಿಂದ ಇವೊತ್ತಿನದಿವಸ ಆಹಾರದ ಕೊರತೆ ಏನಾಗಿದೆ ಎಂದರೆ ಇದ್ದಕ್ಕಿದ್ದಹಾಗೆ ಕಡಿಮಿ ಬಂದಿದೆ. ಬೇಕಾದರೆ 1970ನೇ ಇನಪಿಯ ರಿಪೋರ್ಟು ತರಿಸಿಕೊಂಡು ನೋಡಿ. ನಮ್ಮ ತಾಲ್ಲೂಕಿನ ಮಾರ್ಕೆಟಿಂಗ್ ಸೊಸೈಟಿಯಲ್ಲಿ 4-5 ಸಾವಿರ ಕ್ವಿಂಟಾಲ್ ಬತ್ತ ಹಾಗೆ ಖರ್ಚಾಗದೆ ಇದ್ದು ಅದನ್ನು ಪಬ್ಲಿಕ್‌ನ್ನು ಕರೆದು ನಾವೇ ಕೊಟ್ಟಿದ್ದೇವೆ. ನಾನು ಶಿಗ ಶ್ರೀಂಗೇರಿ ತಾಲ್ಲೂಕಿನ ಮಾರ್ಕೆಟಿಂಗ್ ಸೊಸೈಟಿ ಪ್ರೆಸಿಡೆಟ್ ಆಗಿದ್ದೆ. ದಕ್ಷಿಣ ಕನ್ನಡ ಜಿಲ್ಲೆಯವರು ಬಂದರು, ಎಲ್ಲರಿಗೂ ಮಾರಿದ್ದೇವೆ. ಈ ಒಂದು ವರ್ಷದಲ್ಲಿ ಸ್ಕೇರ್‌ಸಿಟಿ ಬರುವ ಸಂದರ್ಭ ಏನು ಎಂದು ಯೋಚನೆ ಮಾಡುವುದಾದರೆ ಇದು ಒಂದು ಕಾರಣ ಎಂದು ಒಪ್ಪಿಕೊಳ್ಳಬೇಕಾಗಿದೆ. ಅನೇಕರು 2 ಬೆಳೆ ಬೆಳೆಯುವ ಹತ್ತು ಎಕರೆ ಮಿತಿ ಎಂದು ಪ್ರಚಾರವಾದಾಗ ಎರಡು ಬೆಳೆ ಬೆಳೆಯುವುದನ್ನು ಅನೇಕ ರೈತರು ಬಿಟ್ಟಿದ್ದು ಲೆಖಕ್ಕೆ ಸಿಕ್ಕುತ್ತದೆ.

3-30 P.M.

ಶ್ರೀ ಕಾಗೋಡು ತಿಮ್ಮಪ್ಪ.—ಯಂತ್ರೋಪಕರಣಗಳನ್ನು ಹೆಚ್ಚು ಜನ ಕೊಂಡಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳಿದರು. ನಮ್ಮ ರಾಜ್ಯದಲ್ಲಿ ಎಷ್ಟು ಜನ ಕೃಷಿಕರು ಯಂತ್ರೋಪಕರಣಗಳನ್ನು ಹೊಂದಿದ್ದಾರೆಂದು ತಿಳಿಸಿದರೆ ಸ್ವಲ್ಪ ಅನುಕೂಲವಾಗುತ್ತದೆ.

ಶ್ರೀ ಕೆ. ಎನ್. ವೀರಪ್ಪಗೌಡ.—ನನಗೆ ತಿಳಿದ ಹಾಗೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನಿಂದ ಎಲ್ಲರೂ ಕೂಡ ಸಾಲವನ್ನು ಪಡೆದು ಬೇಕಾದಷ್ಟು ಟ್ರಾಕ್ಟರ್‌ಗಳನ್ನು ಕೊಂಡು ಬೆಳೆ ಬೆಳೆಯುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಎಷ್ಟು ಜನ ಇವೊತ್ತು ಇರತಕ್ಕ ಜಮೀನುಗಳನ್ನು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಮತ್ತು ಇತರ ಬ್ಯಾಂಕುಗಳು, ಸೊಸೈಟಿಗಳ ಮತ್ತು ಖಾಸಗಿಯವರಿಗೆ ಆದಾರಮಾಡಿ ಎಷ್ಟು ಸಾಲ ಪಡೆದಿದ್ದಾರೆ ಎನ್ನುವುದನ್ನು ತಿಮ್ಮಪ್ಪನವರು ಪ್ರಶ್ನೆ ಕೇಳಿಬಿಟ್ಟರೆ ಅವರಿಗೆ ಉತ್ತರ ಸಿಕ್ಕುತ್ತದೆ. ಅವರು 10 ಎಕರೆ ಇದ್ದರೂ ಕೂಡ ಸುಖವಾಗಿ ಬಾಳಬಹುದು. 5 ಎಕರೆ ಇದ್ದರೆ ಇನ್ನು ಸುಖವಾಗಿ ಬಾಳಬಹುದು ಎನ್ನುವುದಕ್ಕೆ ಸರಿಯಾದ ಸಾಕ್ಷಿ ಸಿಕ್ಕುತ್ತದೆ. ಎಷ್ಟು ಜನ ಸಾಲವನ್ನು ದುರುಪಯೋಗ ಮಾಡಿದ್ದಾರೆ, ಎಷ್ಟು ಸರಿಯಾಗಿ ವ್ಯವಸಾಯಕ್ಕೆ ಖರ್ಚು ಮಾಡಿದ್ದಾರೆ ಎಂದು ನೋಡಿದರೆ ಗೊತ್ತಾಗುತ್ತದೆ. ನಾನು ರೈತರ ಹತ್ತಿರ ಖುದ್ದಾಗಿ ಮಾತನಾಡಿದ್ದೇನೆ. ಇಷ್ಟೊಂದು ಸಾಲ ಮಾಡುತ್ತೀರಿ ನಮ್ಮ ಗತಿ ಏನು ಎಂದು ಕೇಳಿದೆ. ಬಹುಶಃ ದೇಶದಲ್ಲಿ ಸರ್ಕಾರದ ರೀತಿನೀತಿಗಳು ಸ್ಥಿಮಿತ ಇಲ್ಲವೆಂಬುವುದನ್ನು ಅರಿತು ಇರುವುದರಿಂದ ಊಟ ಮಾಡಿ ತಿಂದು ಹಾಕಿ ಬಿಡೋಣ, ಮಕ್ಕಳು ಮರಿ ಅವರ ಪಾಡು ಅವರು ನೋಡಿಕೊಳ್ಳಲಿ ಎಂದು ಹೇಳಿದ್ದು ಉಂಟು. ಈ ಪರಿಸ್ಥಿತಿಯಲ್ಲಿ ರೈತ ಇರಬೇಕಾದರೆ ರೈತನ ಮಕ್ಕಳು ಸದಸ್ಯರು ಆಗಬೇಕೆಂದರೆ ಹೇಗೆ! ಕೋಣಂದೂರು ಲಿಂಗಪ್ಪ, ಮತ್ತು ಕಾಗೋಡು ತಿಮ್ಮಪ್ಪನವರು ರೈತರ ಮಕ್ಕಳು. ಈ ರೀತಿ ಮುಂದೆ ಕೂಡ ರೈತರ ಮಕ್ಕಳಾಗಿರತಕ್ಕವರು ಇಲ್ಲಿಯವರೆಗೆ ಬರುವ ಅವಕಾಶ ಕಲ್ಪನೆ ಆಗುವುದಕ್ಕೂ ಕೂಡ ಉತ್ಪತ್ತಿ ಎಷ್ಟು ಬೇಕು ಎಂದು ರೇಖೆ ಹಾಕಿಕೊಂಡು ನಿಗದಿ ಮಾಡಬೇಕು. ಮೂರು ಕೋಟಿ ಜನ ನೇಶದಲ್ಲಿ ಇದ್ದಾರೆ. ಎಷ್ಟು ಎಕರೆ ಜಮೀನು ಇದೆ, ಅದನ್ನಾದರೂ ಯೋಚನೆ ಮಾಡಿ ಅವರಿಗೆ ನಮನಾಗಿ ಹಂಚುವಂತೆ ಯಾವುದಾದರೂ ಒಂದು ತೀರ್ಮಾನಮಾಡಿ. ಕೈಗಾರಿಕೆ

ಗಳನ್ನು ಜಾಸ್ತಿಮಾಡಿ ಅಲ್ಲಿ ಹೆಚ್ಚಿಗೆ ಎಂಪ್ಲಾಯ್‌ಮೆಂಟ್ ಒದಗಿಸುವ ಕಡೆ ಹೆಚ್ಚಿಗೆ ಗಮನ ಕೊಡುತ್ತಾ ಇಲ್ಲ. ಶೇಕಡ 80ರಷ್ಟು ಇರತಕ್ಕ ರೈತ ಜನಾಂಗ ಏನು ಇದೆ ಈ ಜನಾಂಗದ ಮೇಲೆ ಹೆಚ್ಚಿನ ದೃಷ್ಟಿ ಇಟ್ಟು ಅವರ ಜಮೀನುಗಳನ್ನು ಸಣ್ಣಸಣ್ಣ ಪ್ಲಾಟ್‌ಮಾಡಿ ಹಂಚಿಬಿಟ್ಟರೆ ಸುಖವಾಗಿ ಬಾಳಬಹುದೇ ಎಂದು ಚೆನ್ನಾಗಿ ಯೋಚನೆ ಮಾಡೋಣ. ಜಮೀನ್ದಾರರಾಗಿರುವವರು ಸರ್ಕಾರದಿಂದ ಸಾವಿರಾರು ಎಕರೆ ಪಡೆದಿರುವವರು ಎಷ್ಟು ಜನ ಇದ್ದಾರೆ? ರೈತ ಜಮೀನು ಮಾರಾಟ ಮಾಡಿದಾಗ, ಆದಾರ ಮಾಡಿದಾಗ ಖರೀದಿ ಮಾಡಿದಾಗ ಕಷ್ಟಪಟ್ಟು ಯಾವ ಹವ್ಯಾಸಕ್ಕೂ ಹೋಗದೆ ಇರತಕ್ಕ ರೈತ ಅದನ್ನು ಕೊಂಡುಕೊಂಡು ಸಾಗುವಳಿ ಮಾಡಿಕೊಳ್ಳುತ್ತಾ ಬಂದಿರುವುದು. ಇದು ಎಲ್ಲರಿಗೂ ಗೊತ್ತಿರುವ ವಿಷಯ. ಆತನ ಹಾಗೆ ಬದುಕುವುದು ಸರಿಯಲ್ಲವೆಂದು ಈ ರೀತಿ ಭೂಸುಧಾರಣೆ ಮಾಡಿದರೆ ದೇಶದ ಆರ್ಥಿಕ ಸ್ಥಿತಿ ಎಷ್ಟರಮಟ್ಟಿಗೆ ಉತ್ತಮವಾಗುತ್ತದೆ? ಆಹಾರದ ಪರಿಸ್ಥಿತಿ ಎಷ್ಟರಮಟ್ಟಿಗೆ ಉತ್ತಮವಾಗುತ್ತದೆ ಎಂದು ಪರಿಶೀಲನೆ ಮಾಡಬೇಕು. 1952ನೇ ಇಸವಿಯಲ್ಲಿ ಪಿ.ಎಸ್.ಪಿ. ಮುಖಂಡರು ಎಲ್ಲಾ ಪ್ರಚಾರ ಮಾಡಿಕೊಂಡು ನಾವು ಬಂದರೆ 5 ಎಕರೆ ಕಾಫಿ ತೋಟ ಕೊಡುತ್ತೇವೆಂದು, ನೀವು ಬಂದರೆ ಏನು ಕೊಡುತ್ತೇವೆಂದು ಹೇಳುವುದಿಲ್ಲ ಎಂದು ಜನರು ಕೇಳಿದಾಗ ಅದಕ್ಕೆ ನಮ್ಮ ಪಕ್ಷದಿಂದ ನಾನು ಹೇಳಿದ್ದು ನಾವು ಬಂದರೆ ನಾವು ಕೊಡತಕ್ಕ ಕಾಗದ ಪತ್ರಗಳನ್ನು ನೀವು ಮೊದಲು ಓದಿ ತಿಳಿದು ಕೊಳ್ಳುವ ಶಕ್ತಿ ಬರಬೇಕು ಆಮೇಲೆ ಕೊಡುತ್ತೇವೆ ಎಂದು ಹೇಳುತ್ತಿದ್ದೆವು. ಓದು ಬಾರದೆ ಕಾಗದ ಕೊಟ್ಟರೆ ಏನು ಪ್ರಯೋಜನ? ಯಾವ ಮನುಷ್ಯ ಜಮೀನು ಎಲ್ಲಾ ಬಿಟ್ಟು ಹೋಗಿದಾನೆ ಅವನ ಪರಿಸ್ಥಿತಿ ಏನಾಗಿದೆ, ಏತಕ್ಕೆ ಊರು ಬಿಟ್ಟು ಹೋದ ಎನ್ನುವುದನ್ನು ತಿಳಿಯಬೇಕು. ಇಡೀ ದೇಶದಲ್ಲಿ ಆರ್ಥಿಕ ಪರಿಸ್ಥಿತಿ ಉತ್ತಮವಾಗಬೇಕೆಂಬ ಅಭಿಪ್ರಾಯ ಇರುವುದಾದರೆ ಜಮೀನಿನ ಮಿತಿ ಏನು ಮಾಡಬೇಕು ಎಂದರೆ ಅದು ಸ್ವಾಭಾವಿಕವಾಗಿ 18 ಎಕರೆಯಿಂದ 54ಎಕರೆ 100 ಎಕರೆಯವರೆಗೆ ಇರಬೇಕಾಗುತ್ತದೆ. ಗುಲ್ಬರ್ಗಾ ಬೆಳಗಾಂ ಮತ್ತು ರಾಯಚೂರು ಪರಿಯಾದಲ್ಲಿ ಕ್ಷಾಮದ, ದವಡೆಗೆ ಸಿಕ್ಕಿ ಸಾಯುತ್ತಾ ಇದ್ದಾರೆ, ಅಂಥವರಿಗೆ ಎಲ್ಲಾದರೂ ಮೂರು ನಾಲ್ಕು ವರ್ಷಕ್ಕೆ ಒಂದುಸಾರಿ ಬೆಳೆ ತೆಗೆಯುವ ಅವಕಾಶ ಸಿಕ್ಕುತ್ತದೆ. 100 ಎಕರೆಯಲ್ಲಿ 200 ಚೀಲ ಬೆಳೆದುಕೊಂಡರೆ ಇನ್ನು ಎರಡು ಮೂರು ವರ್ಷ ನುಡಾರಿಸುವ ಪರಿಸ್ಥಿತಿ ಬರುತ್ತದೆ. ಇಂಥ ಪರಿಸ್ಥಿತಿ ಒದಗಿದಾಗ ಯಾವ ಕಡೆಯಿಂದ ದವನ ಒದಗಿಸುವುದಕ್ಕೆ ಆಗುತ್ತದೆ ಎಂದು ಯೋಚನೆ ಮಾಡಬೇಕಾಗಿದೆ. ಮಾನ್ಯ ಸದಸ್ಯರಾದ ತಿಮ್ಮಪ್ಪನವರು ತೆಂಗಿನತೋಟ ಮತ್ತು ಅಡಿಕೆ ತೋಟದ ಬಗ್ಗೆ ಚನ್ನಾಗಿ ಪ್ರಸ್ತಾಪ ಮಾಡಿದ್ದಾರೆ. ಅವುಗಳ ವಿಷಯದಲ್ಲಿ ಹಿಂದೆ ಆಕ್ಟ್ ಏನು ಮಾಡಿದ್ದಾರೆ. ತೆಂಗಿನತೋಟ ಅಡಿಕೆತೋಟ ಬಿಟ್ಟು ಅಮೆಂಡ್‌ಮೆಂಟ್ ಏನು ಮಾಡಿದ್ದಾರೆ. ತೆಂಗಿನತೋಟವನ್ನು ಖುಷ್ಕಿ ರ್ಯಾಂಡ್ ಎಂದು ಪರಿಗಣಿಸಿ 54 ಎಕರೆ ಇರಬಹುದು ಎಂದು ಮಾಡಿದ್ದಾರೆ. ಇದರಲ್ಲಿ ಅರಕ್ ಗಾರ್ಡನ್ಸ್ ಬಿಟ್ಟಿದ್ದಾರೆ. ಇದು ನಿಜವಾಗಿಯೂ ಕೂಡ ದೇಶಾಭಿಮಾನವಲ್ಲ. ದೇಶದ ಪರಿಸ್ಥಿತಿ ನೋಡಿಕೊಂಡು ಮಾಡಿದಂತಾಗುವುದಿಲ್ಲ. ಅವರವರು ಅವಿಕಾರಗಳನ್ನು ಮಾಡತಕ್ಕ ಅವಕಾಶ ಸಿಕ್ಕಿದಾಗ ಅವರು ಮಾಡತಕ್ಕ ಕಾನೂನು ಮಾತ್ರ ಆಗುತ್ತದೆ. ಅದನ್ನು ತಿರಿಪಡಿಸಬೇಕಾಗುತ್ತದೆ. ಅಡಿಕೆತೋಟ 12 ವರ್ಷಗಳು ಕಷ್ಟಪಟ್ಟು ಬೆಳೆಸಬೇಕು. ಸಾಮಾನ್ಯವಾಗಿ ಗುಡ್ಡ ಬೆಟ್ಟ ಸಂದಿಯೊಳಗೆ ನೀರಿನ ವನತಿ ಇರತಕ್ಕ ಪ್ರದೇಶಗಳಲ್ಲಿ ಕಷ್ಟಪಟ್ಟು ಬೆಳೆಯುತ್ತಾರೆ. ಈ ಬೆಳೆಗೆ ರೇಟು ಇಳಿದಿದೆ ಎಂದು ಮಾನ್ಯ ಸದಸ್ಯರು ಪ್ರಸ್ತಾಪಮಾಡಿದ್ದಾರೆ. ಮುಂದೆ ಯಾವ ಗತಿಗೆ ಹೋಗುತ್ತದೆ ಎನ್ನುವುದು ಗೊತ್ತಾಗುವುದಿಲ್ಲ. ಭೂಸುಧಾರಣೆ ಎಂದು ಹೇಳತಕ್ಕ ಜನ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಅಣೆಕಟ್ಟು ಕಟ್ಟುತ್ತಾರೆ ಆಹಾರ ಧಾನ್ಯ ಬೆಳೆಯುವದಕ್ಕೋಸ್ಕರ ಆದರೆ ಆ ನೀರಿನ ಆಶ್ರಯದಲ್ಲಿ ಇತರ ಅಡಿಕೆ ತೋಟಗಳನ್ನು 50 ಎಕರೆ ಅಡಿಕೆ ಬೆಳೆಸುವ ಅವಕಾಶ ಮಾಡಿಕೊಟ್ಟಿದ್ದಾರೆ, ಇದನ್ನು ಯೋಚನೆ ಮಾಡುವುದಾದರೆ, ಸರ್ಕಾರ ಇದನ್ನು ತಡೆಗಟ್ಟಿ ಆಹಾರದ ಬೆಳೆಗೆ ಅವಕಾಶ ಮಾಡಬಹುದಿತ್ತು. ಇದರ ಕಡೆ ಗಮನವಿಲ್ಲ. ಇನ್ನು ಅನ್‌ಆರ್ಥೈಸ್ಡ್ ಕಲ್ಟಿವೇಷನ್ ಬಹಳಷ್ಟಾಗಿ ಹೇಳಿದ್ದೇನೆ. ಒಂದು ಸಾರಿ ಸರ್ವೆ ಮಾಡಿಸಿ. ಕಾಡು ಗುಡ್ಡದಲ್ಲಿ ನಾಲ್ಕು ಎಕರೆ ಇದ್ದರೆ ಬಡಪಾಯಿ ಅದಕ್ಕೆ ಲೀಜ್ ಹಾಕಿಕೊಂಡು ಅವನಿಗೆ ಕೊಟ್ಟರೆ ಕಾಡು ಗುಡ್ಡದಲ್ಲಿ ಸಾಗುವಳಿ ಮಾಡುವುದಕ್ಕಾಗುವುದಿಲ್ಲ. ಇದನ್ನು ಮಟ್ಟ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ನೀರಿನ ಆಶ್ರಯವಿಲ್ಲ, ಬಾವಿಯಿಲ್ಲ, ನಾಲವಿಲ್ಲ. ಅದಕೋಸ್ಕರವಾಗಿ ಹೆಚ್ಚಿನ ಪ್ರಭಾವ ಇರುವ ಜನ ಏನು ಅಕ್ರಮ ಸಾಗುವಳಿ ಮಾಡಿದ್ದಾರೆ ಎಂದು ಪರಿಶೀಲನೆ ಮಾಡಿ, ಅಂಥ ಸಾಗುವಳಿ ಜಮೀನುಸರ್ಕಾರದ ವಶಕ್ಕೆ ಪಡೆದು ಬಡವರಿಗೆ ಕೊಟ್ಟರೆ ಅವರಿಂದ ಅನೇಕ ಅನುಕೂಲವಾಗುತ್ತೆ. ನಾನು ಒಂದು ಎಕರೆ ಜಮೀನನ್ನು 42ರಿಂದ ತೆಗೆದುಕೊಂಡಿಲ್ಲ. ಅದುದರಿಂದ ಜಮೀನನ್ನು ಜನರಿಗೆ ಕೊಡತಕ್ಕ ಅವಕಾಶ ಗಳನ್ನು ಮಾಡಬೇಕು. ಕಾಫಿ ತೋಟಗಳ ಬಗ್ಗೆ ಯೋಚನೆ ಮಾಡಿ ನೋಡುವುದಾದರೆ 800 ಎಕರೆ ಇದೆಯೆಂದು ಬೇಲಹಾಕಿದರೆ ಒಳಗೆ 2 ಸಾವಿರ ಎಕರೆ ಇರುತ್ತದೆ. ಇದರ ಕಡೆ ಒಬ್ಬರೂ ಕೂಡ ಪ್ರವೇಶ

(ಶ್ರೀ ಕೆ. ಎನ್. ವೀರಪ್ಪಗೌಡ)

ಮಾಡುತ್ತಾ ಇಲ್ಲ. ಸರ್ಕಾರ ನಮ್ಮ ಜಮೀನಿಗೆ ಸೀಲಿಂಗ್ ಹಾಕಿ, ಕಾಫಿ ತೋಟದ ವಿಷಯದಲ್ಲಿ ಒಂದು ಸೆಕ್ಷನ್ ಬೇರೆ ಇಟ್ಟು ನೋಟಿಫಿಕೇಷನ್ ಮಾಡಿ ಸರ್ಕಾರ ಇಷ್ಟು ಬಂದಾಗ ಜಾರಿಗೆ ಕೊಡಬಹುದು ಅಂತ ಇದೆ. ಅಂಥ ದೊಡ್ಡ ವಿಷಯ ಈ ಸಭೆಯ ಮುಂದೆ ಬಂದು ತೀರ್ಮಾನ ಮಾಡುವುದಕ್ಕೆ ಬದಲಾಗಿ ಒಂದು ನೋಟಿಫಿಕೇಷನ್ ಅನ್ನು ಸರ್ಕಾರದ ಮುಖಾಂತರ ಮಾಡುವುದಕ್ಕೆ ಈ ಮನೆಯವರು ಒಪ್ಪುವುದಿಲ್ಲ ಎಂದು ನಾನು ಭಾವಿಸುತ್ತೇನೆ.

ಶ್ರೀ ಎಚ್. ಎಸ್. ಸಿದ್ದಪ್ಪ.—ನಿಮ್ಮ ಪಕ್ಷದವರು ಒಪ್ಪುವುದಿಲ್ಲ.

ಶ್ರೀ ಕೆ. ಎನ್. ವೀರಪ್ಪಗೌಡ.—ಪಕ್ಷದ ವಿಷಯ ಆಮೇಲೆ ಮಾತನಾಡುತ್ತೇನೆ. ಸರ್ಕಾರ ಈ ವಿಷಯದಲ್ಲಿ ಕಾನೂನನ್ನು ಕೈಗೆ ತೆಗೆದುಕೊಳ್ಳುವುದು ಅಷ್ಟಾಗಿ ಚೆನ್ನಾಗಿಲ್ಲ. ಜೊತೆಗೆ ಅನ್‌ಆಥ್ ರೈಸ್ಡ್ ಕಲ್ಟಿವೇಷನ್ ಅನ್ನು ಕೆಲವರು ಮಾಡುತ್ತಿದ್ದಾರೆ. ಇದನ್ನು ಆದಷ್ಟು ಜಾಗ್ರತೆ ಸರ್ವೆ ಮಾಡಿ ಸರ್ಕಾರದ ರ್ಯಾಂಡ್ಸ್ ಅನ್ನು ಕೈಗೆ ತೆಗೆದುಕೊಂಡು ನೇರವಾಗಿ ಯಾರಿಗೆ ಜಮೀನು ಇಲ್ಲವೋ, ಜಮೀನು ಇಲ್ಲದಿರತಕ್ಕ ವ್ಯವಸಾಯಗಾರರ ಕುಟುಂಬಕ್ಕೆ ಅವರಿಗೆ ಕೊಡುವ ಅಗತ್ಯತೆ ಇದೆ. ಭೂಸುಧಾರಣೆ ಮಾಡುವ ಸಂದರ್ಭದಲ್ಲಿ ಅನೇಕ ರೀತಿಯ ಅನುಕೂಲಗಳನ್ನು ನಾವು ಮಾಡಬೇಕಾಗುತ್ತದೆ. ಒರಿಜನಲ್ ಆಕ್ಟ್ ಸೆಕ್ಷನ್ 103ರಲ್ಲಿ ಕೈಗಾರಿಕೆಗಳಿಗೆ ಸಂಬಂಧಪಟ್ಟಹಾಗೆ, ವ್ಯವಸಾಯಕ್ಕೆ ಪ್ರಯೋಜನ ಆಗದೆ ಇರತಕ್ಕ ಜಮೀನುಗಳನ್ನು ರಾ ಮೆಟೀರಿಯಲ್ಸ್ ಬೆಳೆಯುವುದಕ್ಕೆ ಉಪಯೋಗಿಸಿಕೊಂಡು ದೇಶದಲ್ಲಿ ಕೈಗಾರಿಕೆಗಳನ್ನು ಉತ್ತಮಪಡಿಸುವುದಕ್ಕೆ ಅವಕಾಶ ಇದೆ. ಬಹುಶಃ ಈ ಬಿಲ್ಲಿನಲ್ಲಿ ಅದನ್ನು ಸೇರಿಸಿಲ್ಲ. ರೇಬರ್ ಪ್ರಾಬ್ಲಮ್ಸ್ ಇದೆ, ಎಂದು ಹೇಳುತ್ತಾ ಇರುವ ಸಂದರ್ಭದಲ್ಲಿ ಕೈಗಾರಿಕೆಗಳು ಬೆಳೆಯತಕ್ಕ ಅವಕಾಶವನ್ನು ನಾವು ಮಾಡಿಕೊಡಬೇಕಾಗುತ್ತದೆ. ಅನೇಕ ರೂಪದಲ್ಲಿ ಈ ಭೂಸುಧಾರಣೆಯನ್ನು ಕೂಲಂಕುಷವಾಗಿ ವಿಮರ್ಶೆ ಮಾಡಿ ಒಂದು ತೀರ್ಮಾನಕ್ಕೆ ಬರಬೇಕಾದ ಅಗತ್ಯತೆ ಇದೆ. ಇದನ್ನು ನಾವೆಲ್ಲರೂ ಕೂಡ ಒಪ್ಪಿಕೊಳ್ಳಬೇಕಾಗುತ್ತದೆ. ಜೊತೆಗೆ ನಮ್ಮ ಸ್ವಹಿತರು, ಏನು ಸಮಾಜವಾದ, ಸಮಾಜದ ನ್ಯಾಯ ಎಂದು ಏನು ವಾದ ಮಾಡುತ್ತಾರೋ ಆ ವಾದಕ್ಕೆ ನನ್ನ ಸಂಪೂರ್ಣ ಬೆಂಬಲ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಸಮಾಜವಾದಿಗಳೇ ಆಗಿಲ್ಲ, ಶೋಚನೀಯ.

ಶ್ರೀ ಕೆ. ಎನ್. ವೀರಪ್ಪಗೌಡ.—ಸಮಾಜವಾದದ ನ್ಯಾಯ ದೊರೆಯಬೇಕು. ಎಲ್ಲಾ ಜನತೆಗೂ ದೊರೆಯಬೇಕು. ಬೇರೆ ರೈತರ ಮೇಲೆ ಹೊರೆ ಹೊರಿಸುವುದಕ್ಕೆ ಸೋಗಬೇಡಿ.

ಗೇಣಿದಾರರ ವಿಷಯದಲ್ಲಿ ಬಹಳ ಒತ್ತಾಯ ಮಾಡಿ ಮಾತನಾಡಬೇಕಾಗಿದೆ. ಭೂಸುಧಾರಣೆ ಒಂದು ಕತೆ ಇಟ್ಟುಕೊಳ್ಳೋಣ. ಗೇಣಿದಾರನಿಗೆ ಆಗತಕ್ಕ ಚಿತ್ರಹಿಂಸೆ ತಪ್ಪಿಸುವುದಕ್ಕೆ ಸರ್ಕಾರದವರು ಸಾಕಾದಷ್ಟು ಗಮನ ಕೊಡಲೇಬೇಕಾಗುತ್ತದೆ. ಯಾವತ್ತು ಗೇಣಿ ಕಾನೂನು ಜಾರಿಗೆ ಬಂತೋ, ಅವತ್ತಿನಿಂದಲೂ ಅನೇಕ ಕತೆಗಳಲ್ಲಿ ಅವರ ಹೆಸರಿಗೆ ಪಹಣಿ ಇದ್ದರೂಕೂಡ ಬದಲಾವಣೆ ಮಾಡಿ. ಅವರಿಂದ ಜಮೀನನ್ನು ಬಿಡಿಸಿತಕ್ಕ ಪ್ರಯತ್ನ ಅನೇಕ ಕತೆಗಳಲ್ಲಿ ಮಾಡಿದ್ದಾರೆ. ಪಹಣಿ ಇಲ್ಲದಿದ್ದರೆ, ಅವರು ಅಲ್ಲ ವಾಸವಾಗಿದ್ದರೆ, ಈ ವಿಷಯದಲ್ಲಿ ಸರ್ಕಾರದವರು ತೀರ್ಮಾನ ಮಾಡಿ ಕಾನೂನು ಮಾಡಿ ಯಾವ ಮನುಷ್ಯ ಜಮೀನು ಹತ್ತಿರ ವಾಸವಾಗಿದ್ದಾನೆಯೋ, ಹಿಂದೆ ಯಾವ ದಾಖಲಾತಿ ಇದೆಯೆಂದು ನೋಡಿ, ಈಗ ದಾಖಲಾತಿ ಇಲ್ಲದೆ ಇದ್ದರೂ, ಒಂದು ಸೂಕ್ತ ತೀರ್ಮಾನ ಮಾಡುವುದು ಅಗತ್ಯ.

ಹಿಂದಿನ ಕಾಲದಲ್ಲಿ ಗೇಣಿದಾರರಿಗೆ ಜಮೀನ್ದಾರರು ಬೀಜದ ಬತ್ತ ಒಣ ಬತ್ತ ಬಿತ್ತುವ ಸಮಯದಲ್ಲಿ ಕೊಡುತ್ತಿದ್ದರು ಮತ್ತು ಮದುವೆಗೆ ಸಾಲ ಕೊಡುತ್ತಿದ್ದರು. ಆದರೆ ಈ ಕಾನೂನು ಇದ್ದಕ್ಕಿದ್ದಹಾಗೆ ಗೇಣಿದಾರರಿಗೂ, ಜಮೀನ್ದಾರರಿಗೂ ಇರುವ ಬಾಂಧವ್ಯ ಹೋಗಿ ಅವರಿಗೆ ಅತ್ಯಂತ ತೊಂದರೆ ಈ ದೇಶದಲ್ಲಿ ಆಗುತ್ತಾ ಇದೆ.

ಹದಿನಾರು ಕಿಲೋಮೀಟರ್ ಒಳಗೆ ಜಮೀನು ಇರಬೇಕು ಎನ್ನುವ ನಿಯಮ ಇಟ್ಟಿದ್ದಾರೆ. ಇದನ್ನು ಯಾರೂ ಒಪ್ಪತಕ್ಕದಲ್ಲ. ಇವತ್ತು ನಮ್ಮ ಮಕ್ಕಳನ್ನು ಓದಿಸಬೇಕಾಗಿದೆ, ಊರಿನ ಪಕ್ಕದಲ್ಲಿ ಕಾಲೇಜು ಕೊಟ್ಟಿಲ್ಲ, ಹೈಸ್ಕೂಲು ಕೊಟ್ಟಿಲ್ಲ ಅಲ್ಲಿ ಒಂದು ಮನೆ, ಇಲ್ಲಿ ಒಂದು ಮನೆ ಮಾಡುವ ಶಕ್ತಿ ಇಲ್ಲ. 16 ಮೈಲಿಯೊಳಗೆ ವಾಸ ಇರುತ್ತಾನೆ, ಯಾವುದೋ ವಾಹನ ಇಟ್ಟುಕೊಂಡಿರುತ್ತಾನೆ, ಅಥವಾ ಬಸ್‌ನಲ್ಲಿ ಹೋಗುತ್ತಾನೆ, ಯಾವುದಾದರೂ ಒಂದು ವ್ಯವಸ್ಥೆ ಮಾಡಿಕೊಂಡು ಹೋಗುತ್ತಾನೆ, ವ್ಯವಸಾಯ ಮಾಡುತ್ತಾನೆ ಅದು ತಪ್ಪೇ.

ಅಡಿಕೆ ತೋಟದ ವಿಷಯದಲ್ಲಿ ಹೇಳುವುದಾದರೆ, ಅಡಿಕೆ ನುಲಿಯುವುದಕ್ಕೆ ನಮಗೂ ಬರುವುದಿಲ್ಲ, ಮಾನ್ಯ ಲಿಂಗಪ್ಪನವರಿಗೂ ಬರುವುದಿಲ್ಲ. ಕೂಲಿ ಇದಕ್ಕೆ ಬೇಕೇ ಬೇಕು, ಜನ ಇಟ್ಟುಕೊಳ್ಳಬೇಡಿ ಎನ್ನುವ ಪ್ರಶ್ನೆಯಲ್ಲ, ಜನ ಇಟ್ಟುಕೊಳ್ಳದಿದ್ದರೆ, ಈ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. 16 ಕಿಲೋಮೀಟರ್ ಪ್ರಶ್ನೆಯನ್ನು ಇಲ್ಲಿ ಸೇರಿಸಬಾರದು ಎಂದು ನನ್ನ ಸಂಪೂರ್ಣವಾದ.

ಇನ್ನು 12 ಸಾವಿರ ಉತ್ಪತ್ತಿಯ ಮೇಲೆ ಮೇಲ್ಪಟ್ಟು ಉತ್ಪತ್ತಿ ಇದ್ದರೆ ಮಿತಿ ಹಾಕಬಾರದು. ಇದು ದೇಶಕ್ಕೆ ಬಹಳ ಹಾನಿ. ನಾನು ಸ್ವಂತ ಕೆಲಸ ಮಾಡಿಕೊಂಡು ನನ್ನ ಮನೆಯ ಪಕ್ಕದಲ್ಲಿ ಚಿಲ್ಲರೆ ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡಿ ಅದರಲ್ಲೂ, ಇದರಲ್ಲೂ ಸಂಪಾದನೆ ಮಾಡುತ್ತೇನೆ. ಇದು ದೇಶದ ಸಂಪಾದನೆಯಾಗುತ್ತದೆ ಆದ್ದರಿಂದ ಈ ಮಿತಿಯನ್ನು ತೆಗೆದು ಹಾಕಬೇಕು. ಹಾಗೆಯೇ ಇವತ್ತಿನ ದಿವನ ಅಧಿಕಾರಿಗಳ ಸಂಬಳ. ಇದನ್ನು ಯೋಚನೆ ಮಾಡತಕ್ಕದ್ದು ಒಳ್ಳೆಯದು. ನಮಗೆ ತಿಂಗಳಿಗೆ ಐದು ನೂರು ರೂಪಾಯಿ ಸಾಕು ಎಂದು ನಮ್ಮ ಮುಖ್ಯ ಮಂತ್ರಿಗಳು ಹತ್ತು ಎಕರೆ ಜಮೀನಿಗೆ ಹೋಲಿಸಿ ಹೇಳಿದ್ದಾರೆ. ಒಂದು ತಿಂಗಳಿಗೆ ಇವತ್ತು ಸೂಪರ್ ಜ್ಯೂಂ ಸ್ಕೇಲ್ಸ್ ಅನ್ನು ಐ.ಎ.ಎಸ್. ಆಫೀಸರ್ಸ್‌ಗೆ ಮಾಡಿ 3,600 ರೂಪಾಯಿ ಸಂಬಳ ಕೊಡುವುದಕ್ಕೆ ತಯಾರಾಗಿದ್ದೀರಿ. ಒಂದು ಕಡೆ ಹೇಳುವುದು ಸಮಾಜವಾದದ ನ್ಯಾಯ; ಇನ್ನೊಂದು ಕಡೆ ದಿನಬೆಳಗಾದರೆ ನೌಕರರ ಸಂಬಳ ಜಾಸ್ತಿ ಮಾಡಿಕೊಂಡು ಹೋಗುವುದು. ಬಡ ರೈತರಿಂದ ಸುಲಿಗೆ ಮಾಡಿ ಸರ್ಕಾರದ ಖಜಾನೆಗೆ ಹಣ ಕೊಡುವುದಕ್ಕೆ ಅವಕಾಶ ಮಾಡಿಕೊಡುವುದು. ಇದು ಯಾವ ಸಮಾಜವಾದದ ನ್ಯಾಯ? ಒಬ್ಬನಿಗೆ 50 ರೂಪಾಯಿ 60 ರೂಪಾಯಿ ಕೊಡುತ್ತೀರಿ, ಇನ್ನೊಬ್ಬನಿಗೆ 4—5 ಸಾವಿರ ರೂಪಾಯಿ ಕೊಡುವುದು ಯಾವ ಸಮಾಜವಾದ? ಕನಿಷ್ಟ ಅಂದರೂ ಕೂಡ 300 ರೂಪಾಯಿಗಿಂತ ಕಡಿಮೆ ಇರತಕ್ಕ ಸಂಬಳ ಇರಬಾರದು. 1000 ರೂಪಾಯಿಗಿಂತ ಮೇಲೆ ಸಂಬಳ ಇರಬಾರದು. ಇದೂ ಕೂಡ ಈ ಮಸೂದೆಯಲ್ಲಿ ಬರಬೇಕು. ಮಾನ್ಯ ಸದಸ್ಯರು ಹೇಳಿದಹಾಗೆ, ಜನರನ್ನು ಇಟ್ಟುಕೊಳ್ಳಬಾರದು ಎಂದು ಹೇಳುತ್ತಾರೆ, ಆದರೆ, ಒಬ್ಬ ಐ.ಎ.ಎಸ್. ಆಫೀಸರ್‌ಗೆ ಫೈಲನ್ನು ಅತ್ತ ಇತ್ತ ತೆಗೆದುಕೊಂಡು ಹೋಗುವುದಕ್ಕೆ ಒಬ್ಬ, ಅದನ್ನು ಹಿಡಿದು ಕೊಳ್ಳುವುದಕ್ಕೆ ಒಬ್ಬ ಬೇಕು. ರಾಜು ಮಾತ್ರ ಅವರು ಮಾಡುವುದು, ಇಷ್ಟೊಂದು ಅನುಕೂಲಗಳನ್ನು ಒಂದು ಕಡೆ ಒಡಗಿಸುವುದು, ಇನ್ನೊಂದು ಕಡೆ ಅನುಕೂಲ ಇರುವುದನ್ನು ನೋಡಿ ಕಿತ್ತುಕೊಂಡು ಬಿಡಬೇಕು ಎಂದು ಹೇಳುವುದು. ಪ್ರಜಾಪ್ರಭುತ್ವದಲ್ಲಿ ಸತ್ಯ ಧರ್ಮ, ನ್ಯಾಯದಲ್ಲಿ ನಡೆಯಬೇಕು. ಈ ಎಲ್ಲವನ್ನೂ ಕೌಡೀಕರಿಸಿ, ನಗರಗಳಲ್ಲಿಯೂ ಸೀಲಿಂಗ್ ಹಾಕಿ, ಅಧಿಕಾರಿಗಳ ಸಂಬಳದ ವಿಷಯದಲ್ಲಿ ಸೀಲಿಂಗ್ ಹಾಕಿ, ಮತ್ತು ಲ್ಯಾಂಡ್ ಸೀಲಿಂಗ್ ಹಾಕಿ ಒಟ್ಟಿಗೆ ತಂದು ಚರ್ಚೆ ಮಾಡಿದರೆ ಎಲ್ಲರೂ ಸಂತೋಷವಾಗಿ ಒಪ್ಪಿಕೊಂಡು ಒಂದು ತೀರ್ಮಾನಕ್ಕೆ ಬರುತ್ತಾರೆ. ಇವತ್ತು ಕೆಲವೇ ಜನಗಳ ಮೇಲೆ ಈ ಹೊರೆ ಹೇರತಕ್ಕ ಸಂದರ್ಭ ಬಂದಿರುವುದರಿಂದ, ನಮಗೆ ರಸ್ತೆಯಲ್ಲಿಯೂ ಪ್ರಶ್ನೆ ಮಾಡುತ್ತಾರೆ, 3—4 ಕಾರು ಇಟ್ಟುಕೊಂಡು ಓಡಾಡುತ್ತಾರೆ, ಅಂಥವರನ್ನು ಬಿಟ್ಟು ನಡೆದುಕೊಂಡು ಓಡಾಡುವವರ ಮೇಲೆ ಸರ್ಕಾರದ ಕಣ್ಣು ಎಂದು ಹೇಳತಕ್ಕ ನನ್ನ ವೇಶ ದೇಶದಲ್ಲಿ ಬಂದಿದೆ. ಆದ್ದರಿಂದ ಇವೆಲ್ಲವನ್ನೂ ಒಟ್ಟಿಗೆತರತಕ್ಕದ್ದು ಒಳ್ಳೆಯದು ಎಂದು ಹೇಳಿ, ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎಂ. ಮಂಜುನಾಥ್ (ತಿಪಟೂರು).—ಸನ್ಮಾನ್ಯ ಅಧ್ಯಕ್ಷರೇ, ಈ ಭೂ ಸುಧಾರಣೆ ಮಸೂದೆಯನ್ನು ಈ ಸಭೆಯಲ್ಲಿ ರೆವಿನ್ಯೂ ಮಂತ್ರಿಗಳಾದ ಶ್ರೀ ಹುಚ್ಚಮಾಸ್ತಿಗೌಡರು ಮಂಡಿಸಿದ್ದಾರೆ. ಈ ಮಸೂದೆಯಿಂದ ರೈತಾಪಿ ಜನರಲ್ಲಾಗಿರುವ ಗೊಂದಲ ಅವರ ಮನಸ್ಸಿನ ಮೇಲಾಗಿರುವ ಪರಿಣಾಮ ಹೇಳಕೀರದಾಗಿದೆ. ಸಮಾಜವಾದಿ ಸರಕಾರ ತಮಗೆ ಜಮೀನನ್ನು ಕೊಡಿಸುವುದೆಂದು ಹುಚ್ಚುಹುಚ್ಚಾಗಿ ಒಂದು ಕಡೆ ಜನರು ಬಾಯಿ ಬಿಟ್ಟುಕೊಂಡಿದ್ದಾರೆ ಇನ್ನೊಂದು ಕಡೆ ಭೂಮಿಯನ್ನು ಕಷ್ಟಪಟ್ಟು ತಾತ ಮುತ್ತಾತನ ಕಾಲದಿಂದ ಬೆವರು ಸುರಿಸಿ ಉಳಿಸಿಕೊಂಡು ಉಳುಮೆಮಾಡಿಕೊಂಡಿದ್ದವರಿಗೆ ಆದರಮೇಲೆ ಅಧಿಕಾರವಿಲ್ಲದೆ ಹೋಗಬಹುದೆಂಬ ಸಂಕಟ ಪ್ರಾಪ್ತವಾಗಿದೆ. ನಾನೂ ಒಬ್ಬ ರೈತನ ಮಗನಾಗಿ ಅವರ ಅಭಿಪ್ರಾಯ ಒಟ್ಟಾರೆ ಹೇಳುವುದಾದರೆ ಸರಕಾರ ತಂದಿರುವ ಈ ಮಸೂದೆ ಎಲ್ಲಾ ವಿಧದಲ್ಲೂ ವಿರೋಧಿಸಿ ಮಾತನಾಡುತ್ತೇನೆ, ಯಾವ ರೈತ ಬೆನ್ನೆಲುಬು ಎಂದು ಪೋಷಣೆ ಸರಕಾರ ಮಾಡುತ್ತಿತ್ತು ಅಂಥ ಸರಕಾರ ಇಂದು ರೈತನ ಬೆನ್ನಿನ ಮೇಲೆ ಬಾಕು, ಚಾಕು ಹಾಕಿದೆ. ಸಮಾಜವಾದವನ್ನು ಜಾರಿಗೆ ತರುವುದಾಗಿ ಹೇಳುವ ಮಂತ್ರಿಗಳು ರೈತರನ್ನು ಶೋಷಣೆ ಮಾಡಿ ಅವನ ಶಕ್ತಿಯನ್ನು ಕಡಮೆ ಮಾಡಿ ಅವನು ಯಾವ ಕ್ಷೇತ್ರದಲ್ಲೂ ಮುಂದುಪರೆಯಲು ಅವಕಾಶವಿಲ್ಲದಂಥ ಒಂದು ವಾತವರಣವನ್ನು ಉಂಟುಮಾಡಿದ್ದಾರೆ.

(ಶ್ರೀ ಟಿ. ಎಂ. ಮಂಜುನಾಥ್)

ಈ ದಿವಸ ಸರಕಾರ ರಾಷ್ಟ್ರೀಕರಣವಾಗಲಿ ಅಥವಾ ಮಿತಿ ಹಾಕುವ ಕಾರ್ಯವಾಗಲಿ ಮಾಡುವಾಗ ಅದಕ್ಕೆ ಸಂಬಂಧಪಟ್ಟ ವರ್ಗದ ಜನರ ಮೂಲಭೂತ ಸಮಸ್ಯೆಯನ್ನು ಬಿಡಿಸುವ ಶಕ್ತಿಯಿಲ್ಲದೆ ತೊಂದರೆಯಾಗುತ್ತಿದೆ. ರೈತರು ತಮ್ಮ ಪ್ರಾಣಕ್ಕಿಂತ ಹೆಚ್ಚಾಗಿ ಕಾಪಾಡಿಕೊಂಡು ಬಂದಿರುವ ಭೂಮಿ ಕಿತ್ತುಕೊಳ್ಳುವುದು ಸರಿಯೇ? ರೈತರಿಗೂ ಭೂಮಾತೆಗೂ ಪರಸ್ಪರ ಸಂಬಂಧವಿದೆ, ಅದು ಯಾವುದೋ ಕಾಲದಿಂದ ಬೆಳೆದುಬಂದಿದೆ. ಅವರು ಬಹಳ ಕಾಲದಿಂದ ಕಾಪಾಡಿಕೊಂಡು ಬಂದಿದ್ದಾರೆ. ರೈತರ ಆಸ್ತಿಯನ್ನು ಕಿತ್ತುಕೊಳ್ಳಲು ಸರಕಾರಕ್ಕಿರುವ ಹಕ್ಕೇನು? ಇದು ಮಾನ್ಯ ಸದಸ್ಯರು ಯೋಚನೆಮಾಡಬೇಕಾದ ಮುಖ್ಯ ವಿಷಯ. ಬಹುತಃ ನಾನು ಮಾತನಾಡುವಾಗ ನಾನು ಪ್ರತಿಗಾಮಿಯಾಗಿರಬೇಕು ಎಂಬ ಭಾವನೆ ಬರಬಹುದು.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—25 ವರ್ಷದಿಂದ ಭೂ ಸುಧಾರಣೆಯಲ್ಲಿ ನಂಬಿಕೆ ಇರಲಿಲ್ಲ ಎಂದು ಅವರು ಒಪ್ಪಿಕೊಂಡಹಾಗಾಯ್ತು.

ಶ್ರೀ ಟಿ. ಎಂ. ಮಂಜುನಾಥ.—ಚಂದ್ರಶೇಖರ್‌ರವರು ನಿನ್ನೆ ಭಾಷಣ ಮಾಡುತ್ತಿದ್ದುದನ್ನು ಕೇಳಿ ಅವರಿಗೇನೂ ಆಸ್ತಿಯಿಲ್ಲವೆಂಬ ಭಾವನೆ ಬಂತು. ಆದರೆ ನಂತರ ವಿಚಾರ ಮಾಡಲಾಗಿ ಅವರಿಗೆ ನೂರಾರು ಎಕರೆ ಜಮೀನಿದೆಯೆಂದು ಗೋತ್ತಾಯಿತು. ನಿಜವಾಗಿಯೂ ಅವರು ಸಮಾಜವಾದಕ್ಕನುಗುಣವಾದ ಭಾಷಣ ಮಾಡುತ್ತಿರುವರೆಂದು ಅಂದುಕೊಂಡಿದ್ದೆ. ಶಾಸ್ತ್ರ ಹೇಳಲಿಕ್ಕಿದೆ ಬದನ್‌ಕಾಯಿ ತಿನ್ನಲಿಕ್ಕಿದೆ ಎಂಬುದು ಈ ಸಂದರ್ಭದಲ್ಲಿ ನೆನಪಿಗೆ ಬರುವುದು. ಸರಕಾರ ತಂದಿರುವ ಮಸೂದೆ ನಾಟಕೀಯವಾಗಿದೆ. ಲಕ್ಷಗಟ್ಟಲೆ ಜನರಿಗೆ ಭೂಮಿಯಿಲ್ಲದಿರುವಾಗ ಭೂಮಿಯನ್ನು ಎಷ್ಟು ಜನರಿಗೆ ಕೊಡುವರು? ಭೂಮಿಗೆ ಒತ್ತಡ ಬೆಳೆದಿದೆ. ರಾಷ್ಟ್ರೀಕರಣ ಮಾಡಿ ಭೂಮಿ ಹಂಚುತ್ತಿಲ್ಲ. ರೈತನ ಉತ್ಪತ್ತಿ ಜಾಸ್ತಿಮಾಡಿ ಉತ್ಪತ್ತಿಯನ್ನು ಹಂಚಬೇಕು. ಇದು ಸಮತಾವಾದದ ಗುರಿ. ಇಂದು 10 ಎಕರೆಯ ಮಿತಿಯಿದೆ. ಅಷ್ಟರಿಂದ ಸಮಾಜದಲ್ಲಿ ಉತ್ತಮ ರೀತಿಯಲ್ಲಿ ಬಾಳಲು ಸಾಧ್ಯವೇ ಎಂದು ಯೋಚನೆ ಮಾಡಿದ್ದೀರಾ? ಉಪಯೋಗಮಾಡುವ ಪದಾರ್ಥಗಳ ಬೆಲೆ ಏರಿದೆ. ರೈತ ತನ್ನ ಮಕ್ಕಳನ್ನು ಸಾಕಿ ವಿದ್ಯಾವಂತರನ್ನಾಗಿ ಮಾಡಿ ಒಳ್ಳೆಯ ರೀತಿಯಲ್ಲಿ ಈಗ ಹಾಕುವ ಮಿತಿಯಿಂದ ಸಾಧ್ಯವೇ? ಸರಕಾರ ಇಂದು ಸಣ್ಣ ಹಿಡುವಳಿದಾರರಿಗೆ ಉಪಕಾರ ಮಾಡುವುದಾಗಿಯೂ, ಅವರ ಆರ್ಥಿಕ ಪರಿಸ್ಥಿತಿ ಸುಧಾರಿಸುವುದಾಗಿಯೂ ಹೇಳುತ್ತಿದೆ. ರೈತರಿಗೆ ನಾನಾ ಸಮಸ್ಯೆಗಳಿವೆ, ಅವನು ಈಗ ಹಾಕುವ ಮಿತಿಯಲ್ಲಿ ಹೊಂದಿಕೊಳ್ಳಲು ಸಾಧ್ಯವೇ ಅವನ ಮಕ್ಕಳಿಗೆ ಎಲ್ಲರಂತೆ ವಿದ್ಯಾಬ್ಯಾಸ ಮಾಡಿಸಿ ಅಧಿಕಾರಿಯಾಗಲು ಅವಕಾಶ ಮಾಡಬೇಡವೇ, ಅವನ ಮಕ್ಕಳು ಮಂತ್ರಿಗಳಾಗಬಾರದೇ ಇವುಗಳ ಬಗ್ಗೆ ಅವನಿಗೆ ಆಸೆ ಇತರರಂತೆ ಇರುವುದಿಲ್ಲವೇ ಎಂಬುದನ್ನೆಲ್ಲಾ ಈ ಮಸೂದೆ ತರುವಾಗ ಯೋಚನೆ ಮಾಡಬೇಕಾಗಿತ್ತು. ಈಗ ರೈತ ಮೂಕ ಪ್ರಾಣಿಯಂತೆ ದುಡಿಯುತ್ತಿದ್ದಾನೆ.

16 ಕಿಲೋಮೀಟರಿಗಿಂತ ಹೆಚ್ಚು ದೂರದಲ್ಲಿ ಭೂಮಿ ಇರಬಾರದು ಎಂದು ಮಸೂದೆಯಲ್ಲಿ ಸೂಚಿಸಲಾಗಿದೆ, ಅದಕ್ಕಿಂತ ಹೆಚ್ಚು ದೂರದಲ್ಲಿ ಇಟ್ಟುಕೊಳ್ಳುವಂತಿಲ್ಲ. ಹಾಗಿರುವಾಗ ಹತ್ತು ಮೈಲಿಗಳೊಳಗೆ ಕಾಲೇಜು ಪ್ರಾಥಶಾಲೆ ಮುಂತಾದುವುಗಳಿಗೆ ಅವಕಾಶ ಮಾಡಿದೆಯೇ? ರೈತರ ಮಕ್ಕಳು ಪದವೀಧರರಾಗಬೇಡವೇ? ಅವರೂ ಕೂಡ ವೈಜ್ಞಾನಿಕ ರೀತಿಯಲ್ಲಿ ವ್ಯವಸಾಯ ಮಾಡಬೇಡವೇ? ಇದಕ್ಕೆಲ್ಲಾ ಸರಕಾರ ಅವಕಾಶ ಮಾಡಿದೆಯೇ ಎಂಬುದನ್ನು ಯೋಚನೆಮಾಡಬೇಕು. ಕೇವಲ ಹಳ್ಳಿಗಳಲ್ಲಿರುವವರಿಗೆ ಭೂಮಿ ಕೊಡಿಸಿ ಆದರ್ಶವಾದ ಸಮಾಜವಾದ ಜಾರಿಗೆ ತಂದಿರುವುದಾಗಿ ಹೇಳುವುದು ಸರಿಯಲ್ಲ. ಜವಾಬ್ದಾರಿ ಸ್ಥಾನದಲ್ಲಿರುವವರು ಹೇಗೆ ಮಾಡಿದರೆ ಸಮಾಜಕ್ಕೆ ಅನುಕೂಲವೆಂಬುದನ್ನು ಪರಿಶೀಲಿಸಿ ತಕ್ಕ ವ್ಯವಸ್ಥೆ ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಸೇಕಡ 8 ರಷ್ಟು ಒಂದು ತರದ ರೈತರಿದ್ದಾರೆ, ಸೇಕಡ 92 ರಷ್ಟು ಬೇರೆ ರೀತಿಯ ರೈತರಿದ್ದಾರೆ. ಇದರಿಂದ ಯಾರ ಶೋಷಣೆ ಯಾಗುವುದು?

ಶ್ರೀ ಟಿ.ಎಂ. ಮಂಜುನಾಥ್—ನಾನು ಕಳಕಳಿಯಿಂದ ಇವರಲ್ಲ ಕೇಳುವುದು ತಿಮ್ಮಪ್ಪನವರು ಅಡ್ಡೋಕೇಶರು, ಸಾವಿರಾರು ರೂಪಾಯಿಗಳ ಸಂಪಾದನೆ ಮಾಡುವ ರಾಯರುಗಳಿದ್ದಾರೆ. ಅದರೆ ಆವರು ಕಡಮೆ ವರಮಾನವಿರುವವರಲ್ಲಿ ಅವನ್ನು ಹಂಚುವುದಿಲ್ಲ. ಇದು ದ್ವೇಷದತ್ತವಾಗಿ ನಿರ್ಮಾಣವಾಗಿರುವ ಸಮಾಜ. ಅವರವರ ಕರ್ಮದ ಫಲ ಅವರು ಊಟಮಾಡುವರು. ಅದನ್ನು ಬದಲಾಯಿಸಲು ಸಾಧ್ಯವಿಲ್ಲ. ಗೋಪಾಲಗೌಡರು ಸಮಾಜವಾದೀ ಪಕ್ಷದ ನಾಯಕರಾಗಿದ್ದರು. ತಿಮ್ಮಪ್ಪನವರೇಕೆ ಆಗಿಲ್ಲ? ನಾನು 10 ಎಕರೆಯ ಮಿತಿಯನ್ನು ವಿರೋಧಿಸಿ ಮಾತನಾಡುತ್ತಿದ್ದೇನೆ. ಭೂ ಸುಧಾರಣೆ ಮಾಡಬಾರದೆಂದು ನಾನು ಹೇಳುತ್ತಿಲ್ಲ.

4-00 P.M.

ಸರ್ಕಾರದವರು ರೈತನಾಗನವನಿಗೆ ಬಹಳ ಮುಖ್ಯವಾಗಿ ಬೇಕಾದ್ದೇನೆಂಬುದನ್ನು ತಿಳಿದಿದ್ದಾರೆಯೆ ? ರೈತನಿಗೆ ಬಹಳ ಅಗತ್ಯವಾಗಿ ಬೇಕಾದ್ದು ನೀರಿನ ಸೌಲಭ್ಯ. ಅದನ್ನು ಸರ್ಕಾರಕ್ಕೆ ಒದಗಿಸುವುದಕ್ಕೆ ಸಾಧ್ಯವೇ ? ಮಳೆಗಾಲ ಬಂದರೇನೇ ಸಾಧ್ಯ. ಅದಕ್ಕೆ ದೇವರು ಕೃಪೆ ಮಾಡಬೇಕು—ಪ್ರಕೃತಿಯ ಅನುಗ್ರಹ ನಮಗೆ ಬೇಕು. ರೈತರು ಈ ದಿನ ಅವರವರ ಯೋಗ್ಯತೆಗೆ ತಕ್ಕಹಾಗೆ ಅನೇಕ ಕಷ್ಟಗಳಿಗೆ ಒಳಗಾಗಿದ್ದಾರೆ. ಅನೇಕ ಮಾನ್ಯ ಸದಸ್ಯರಿಗೆ ರೈತನ ಕಷ್ಟ ಕಾರ್ಪಣ್ಯಗಳೇನೆಂಬುದು ಚೆನ್ನಾಗಿ ಗೊತ್ತಿದೆ. ಆದರೆ ಆ ಒಟ್ಟಿಗಾಗಿ ಹೆದರಿಕೊಂಡು ಇಲ್ಲಿ ಮಾತನಾಡುವುದಕ್ಕೆ ಕೆಲವರು ಹೆದರುತ್ತಿದ್ದಾರೆ ಅಷ್ಟೇ. ಹಾಗೂ ಆಡಳಿತಪಕ್ಷದಲ್ಲಿರತಕ್ಕ ಶ್ರೀ ವೀರಪ್ಪ ಗೌಡರು ಈ ತಿದ್ದುಪಡಿಯನ್ನು ಒಂದು ರೀತಿಯಲ್ಲಿ ತೀವ್ರವಾಗೇ ವಿರೋಧಿಸಿದ್ದಾರೆ. ಇದು ರೈತನ ಜೀವನ ಮರಣದ ಸಮಸ್ಯೆ. ಆದುದರಿಂದ ನಾನು ಸರ್ಕಾರದವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ—ಅವರು ಈ ವಿಚಾರದಲ್ಲಿ ಬಹಳ ವಿವೇಕದಿಂದ ಜಾಣ್ಮೆಯಿಂದ ವರ್ತಿಸಬೇಕಾಗಿದೆ ಎಂದು. ಈ ಪ್ರಶ್ನೆಯನ್ನು ಒಂದು ರಾಜಕೀಯ ದೃಷ್ಟಿಯಿಂದ ನೋಡದೆ ಇದರ ನೈಜಸ್ವರೂಪದಲ್ಲಿ ಇದನ್ನು ಎಲ್ಲಾ ಸದಸ್ಯರು ಪರಿಶೀಲನೆ ಮಾಡಬೇಕಾಗಿದೆ. ಇಲ್ಲಿ ಕೆಲವು ರಾಜಕೀಯ ಮುಖಂಡರು ಈ ಸುಧಾರಣೆಯಿಂದ ಕೇವಲ ರಾಜ್ಯದಲ್ಲಿರತಕ್ಕ ೨೯ ೫ಷ್ಟು ಇರತಕ್ಕ ದೊಡ್ಡ ಜಮೀನ್ದಾರರಿಗೆ ಕೊಂದರಯಾಗಬಹುದೆಂದು ಹೇಳುತ್ತಿದ್ದಾರೆ. ಆ ಮಾತು ಹಾಗಿರಲಿ. ಈಗ ಸರ್ಕಾರದವರು ದೇಶದಲ್ಲಿ ಗರಿಬೀ ಹಟಾವೋ ಯೋಜನೆಯನ್ನು ಪ್ರಾರಂಭ ಮಾಡಿದ್ದಾರಲ್ಲ ಅದರಿಂದ ಆಗತಕ್ಕ ಪರಿಣಾಮವೇನು ? ರಾಜ್ಯದಲ್ಲಿ ಎಲ್ಲಿಯಾದರೂ ಅಲ್ಪಸ್ವಲ್ಪ ಜನರು ಮೈತುಂಬಾ ಬಟ್ಟೆ ಹೊಟ್ಟೆ ತುಂಬ ಅನ್ನಕ್ಕೆ ಮಾರ್ಗ ಮಾಡಿಕೊಂಡಿದ್ದರೆ ಅದನ್ನೂ ಹಾಳು ಮಾಡಿ ಅವರೂ ಕೂಡ ಅರೆಹೊಟ್ಟೆ ಅರಬಟ್ಟೆಯಲ್ಲಿರುವಂತೆ ಮಾಡುತ್ತಾರೆ. ಅದೇ ಈ ಗರಿಬೀ ಹಟಾವೊ ಪ್ರೊಗ್ರಾಮಿನ ಮೂಲ ಉದ್ದೇಶ. ರಾಜ್ಯದಲ್ಲಿ ಸಾವಿರಾರು ವರ್ಷಗಳಿಂದ ಸುಖವಾಗಿದ್ದ ರೈತಾಪಿ ವರ್ಗವನ್ನು ಛಿದ್ರಗೊಳಿಸಿ ಹಾಳುಮಾಡಿದ್ದಾರೆ ಈ ರೀತಿಯ ಕಾರ್ಯಕ್ರಮಗಳಿಂದ. ಅನೇಕ ವರ್ಷಗಳಿಂದಲೂ ಭಾರತದಲ್ಲಿ ಹತ್ತಾರು ಜನರನ್ನು ಒಳಗೊಂಡಿದ್ದಂಥ ಅವಿಭಕ್ತ ಕುಟುಂಬಗಳು ಸುಖವಾಗಿ ಜೀವನ ಮಾಡುತ್ತಿದ್ದವು. ಭೂಮಿಯಲ್ಲಿ ಒಳ್ಳೆಯ ಬೆಳೆಯನ್ನೂ ಕೂಡ ತೆಗೆಯುತ್ತಿದ್ದರು. ಆದರೆ ಸರ್ಕಾರದವರು ತರುತ್ತಿರುವ ಮಸೂದೆಗಳ ಅಥವಾ ಕಾನೂನುಗಳ ಫಲವಾಗಿ ಅವರ ಐಕ್ಯಮತ್ಯ ಹಾಳಾಗಿ ಹೋಯಿತು. ನಗರಗಳಲ್ಲಿ—ಪಟ್ಟಣಗಳಲ್ಲಿ ವಾಸಮಾಡತಕ್ಕ ಬುದ್ಧಿಜೀವಿಗಳಾದವೋ ತಮ್ಮ ತಮ್ಮ ಕೈಲಿದ್ದ ಅಪಾರ ಭೂ ಆಸ್ತಿಯನ್ನು, ತಾವು ಕಾನೂನು ಬಲ್ಲವರಾಗಿದ್ದ ಕಾರಣ ಆ ಭೂಮಿಯನ್ನು ತಮ್ಮ ತಮ್ಮ ಸಂಬಂಧಿಗಳಲ್ಲೇ ಉಳಿಯುವಂತೆ ನೆಪಮಾತ್ರದ ಒಂದೊಂದು ಕೋಆಪರೇಟೀವ್ ಫಾರ್ಮಿಂಗುಗಳನ್ನಾಗಿ ಪರಿವರ್ತಿಸಿಕೊಂಡಿದ್ದಾರೆ. ಆದರೆ ಅತ್ತ ಹಳ್ಳಿಜನರ ಕುಟುಂಬಗಳ ಪಾಡೇನಾಗಿದೆ ಎಂಬುದನ್ನೂ ನೋಡಿ ? ಅಲ್ಲಿ ಈ ದಿವಸ ಕೂಡ ನಾಲ್ಕು ವರ್ಷದ ಮಗುವೂ ಕೂಡ ತನ್ನ ಜಮೀನಿನಿಗೆ ಗೊಬ್ಬರವನ್ನು ಅಂದರೆ ಸಗಣಿಯನ್ನು ಹೊರುತ್ತಿದೆ, ಆದರೆ ಈ ದಿವಸ ಅವಿಭಕ್ತ ಕುಟುಂಬಗಳೆಲ್ಲಾ ಹರಿದು ಛಿದ್ರ ಛಿದ್ರವಾಗಿ ಹುಚಹೋಗಿವೆ. ಈ ಭೂಮಿಗಾಗಿ ಅಣ್ಣ—ತಮ್ಮಗಳಿಗೆ ವ್ಯಾಜ್ಯ ; ತಂದೆ—ಮಕ್ಕಳಿಗೆ ವ್ಯಾಜ್ಯ ; ಗಂಡ—ಹೆಂಡತಿಗೇ ವ್ಯಾಜ್ಯ. ಇದಕ್ಕೆಲ್ಲಾ ಮೂಲ ಕಾರಣ ಸರ್ಕಾರದವರು ತರತಕ್ಕ ಕಾನೂನುಗಳೇ. ಇವು ಜನರಲ್ಲಿ ಅಂಥ ಒಂದು ಭ್ರಾಂತಿ ಇಲ್ಲವೆ ಭ್ರಮಣೆಯನ್ನು ಉಂಟುಮಾಡತಕ್ಕವುಗಳಾಗಿವೆ. ಇಂಥ ಕಾನೂನುಗಳನ್ನು ಸರ್ಕಾರ ಸಡಿಸತಕ್ಕ ಜನರು ತಮ್ಮ ಒಂದು ಪಟ್ಟಭದ್ರ ಆಸಕ್ತಿಯಿಂದ ಮಾಡುತ್ತಿದ್ದಾರೆ. ಇವರ ಅಭಿಪ್ರಾಯ ರೈತನ ಮಗ ರೈತನಾಗೇ ಉಳಿಯಬೇಕು ಎಂಬುದಾಗಿದೆ. ಒಕ್ಕಲಿಗನ ಮಗ ಒಕ್ಕಲಿಗನಾಗೇ ಇರಲಿ ಎಂಬುದು ಇವರ ಉದ್ದೇಶ ; ಇದೇ ಇವರ ಉದ್ದೇಶವೆಂದು ನಾನು ಖಡಾಖಡಿಯಾಗಿ ಹೇಳುತ್ತೇನೆ. ಈಗ ಸರ್ಕಾರದವರು ನಿಗದಿ ಮಾಡಿರತಕ್ಕ ಹತ್ತು ಸ್ಟಾಂಡರ್ಡ್ ಎಕರೆ ಭೂಮಿ ಏನಿದೆ ಅದರಿಂದ ರೈತನ ಅಭಿವೃದ್ಧಿ ಸಾಧನೆಯಾಗುತ್ತದೆಯೇ ? ಇಂಥ ಬಿಲ್ಲನ್ನು ಸರ್ಕಾರದವರು ಖಂಡಿತ ತಪ್ಪಾಗಿದಾಗಿತ್ತು. ಈಗಲಾದರೂ ಈ ಬಿಲ್ಲನ್ನು ಸರ್ಕಾರದವರು ವಾಪಸ್ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅನಂತರ ಸರ್ಕಾರದವರಲ್ಲಿ ನನ್ನ ಒಂದು ಪ್ರಾರ್ಥನೆ ಏನೆಂದರೆ ಹಳ್ಳಿಗಾಡುಗಳಲ್ಲಿ ರೈತಾಪಿಜನರ ನಿಜವಾದ ಕಷ್ಟ ಕಾರ್ಪಣ್ಯಗಳೇನು ಎಂಬುದನ್ನು ಕಂಡುಹಿಡಿಯುವುದಕ್ಕಾಗಿ ಒಂದು ತಜ್ಞರ ತಂಡವನ್ನು ನೇಮಕ ಮಾಡಿ. ಅವರು ಮೊದಲು ಏಂಕ್(ಅಂಶಗಳನ್ನು) ಶೇಖರಣೆ ಮಾಡಲಿ ತದನಂತರ ಇದನ್ನು ವಿಚಾರ ಮಾಡೋಣ. ಈ ದಿವಸ ಆ ತಂಡದವರು ಯಾವ ಹಳ್ಳಿಗೇ ಹೋಗಲಿ ಅಲ್ಲಿ ರೈತನ ಪರಿಸ್ಥಿತಿ ಹುರುಳಿ ಕಾಳ ಚೆಟ್ನಿ ಮತ್ತು ರಾಗಿ ರೊಟ್ಟಿ. ಆದರೆ ನಾವೆಲ್ಲರೂ ಇಲ್ಲಿ ಇಷ್ಟು ಮಾತನಾಡುತ್ತಿದ್ದೇವೆ—ನಾವು ಯಾರಾದರೂ ನಮ್ಮ ಸುಖ ಜೀವನವನ್ನು ಬೊಟಕು ಮಾಡಿಕೊಂಡಿದ್ದೇವೆಯೇ ? ಮಂತ್ರಿ

(ಶ್ರೀ ಟಿ. ಎಂ. ಮಂಜುನಾಥ್)

ಗಳು ತಮ್ಮ ಜೀವನದಲ್ಲಿ ಏನಾದರೂ ಕಡಮೆ ಮಾಡಿಕೊಂಡಿದ್ದಾರೆಯೇ ? ಸರ್ಕಾರದಲ್ಲಿ ಒಬ್ಬ ಅಧಿಕಾರಿಗೇಕೆ 5 ಸಾವಿರ ರೂಪಾಯಿ ಸಂಬಳ ! ಇನ್ನೊಬ್ಬ ಅಧಿಕಾರಿಗೇಕೆ 500 ರೂಪಾಯಿ ಸಂಬಳ ! ಸೋಷಿಯಲಿಸ್ಟಿಕ್ ಪ್ಯಾಟರನ್ ಎಂದಾಗ ಎಲ್ಲರಿಗೂ ಒಂದೇ ರೀತಿಯು ಸಂಬಳಸಾರಗೆ ಗಳು ಇರಬೇಡವೇ ? ನೌಕರವರ್ಗದಲ್ಲಿ ಒಬ್ಬರ ಸಂಸಾರ ಬಹಳ ಸುಖದಿಂದಿದ್ದಾಗ ಇನ್ನೊಬ್ಬ ನೌಕರನ ಸಂಸಾರ ಕಷ್ಟದಲ್ಲಿ ನರಳುತ್ತಿರುವುದಕ್ಕೇನು ಕಾರಣ ? ಸಮಾಜ ಜೀವನದಲ್ಲಿ ಎಲ್ಲರಿಗೂ ಸಮಬಾಳು—ಎಲ್ಲರಿಗೂ ಸಮಪಾಲು ಎಂದರೆ ಇದೇನೇನು ? ಈ ದಿವಸ ಎಲ್ಲಯು ಕಾಣದ ಸಮಾಜವಾದ ರೈತಾಪಿವರ್ಗದಲ್ಲೇ ಕಾಣಬೇಕೇ ! ಇವರೆಲ್ಲಾ ಮೂಕ ಪ್ರಾಣಿಗಳೆಂದು ಇವರನ್ನು ಹಿಂಸೆಪಡಿಸುವುದಕ್ಕೆ ಹೊರಟಂತೆ ಕಾಣುತ್ತಿದೆ. ಇದರಿಂದ ಮುಂದೆ ದೇಶದಲ್ಲಿ ದೊಡ್ಡ ರಕ್ತಕ್ರಾಂತಿ ಎದ್ದೀತು ಎಂದು ಎಚ್ಚರಿಕೆಯನ್ನು ನಾನೀಗಲೇ ನೀಡುತ್ತಿದ್ದೇನೆ. ದೇಶದಲ್ಲಿ ಯಾರು ಯಾರು ದೇಹ ದಂಡಿಸಿ ತಮ್ಮ ರಕ್ತವನ್ನು ಬಸಿದು ಆಸ್ತಿಯನ್ನು ಮಾಡಿದ್ದಾರೆ ಅಂಥವರು ತಮ್ಮ ಆಸ್ತಿಯನ್ನ ಏಕಾ ಏಕಿ ಅವರು ಬಿಟ್ಟು ಕೊಡುವುದಕ್ಕೆ ಎಂದಿಗೂ ಒಪ್ಪುವುದಿಲ್ಲ. ಈ ದಿವಸ ಇಲ್ಲಿ ಇಷ್ಟುಜನ ಸದಸ್ಯರಿದ್ದಾರೆ. ನಾನು ಕೇಳುತ್ತೇನೆ ನೀವು ಈ ದಿವಸ ನಿಮ್ಮ ಸದಸ್ಯತ್ವಕ್ಕೆ ರಾಜೀನಾಮೆ ಕೊಡಿ ಎಂದು; ಅದಕ್ಕೆ ಯಾರಾದರೂ ಸಿದ್ಧವಾಗಿದ್ದಾರೆಯೇ ? ಇಲ್ಲಿ ಶ್ರೀ ಕಾಗೋಡು ತಿಮಪ್ಪ ಅವರಾದರೂ ಏತಕ್ಕೆ ಈ ವಾದ ಮಾಡುತ್ತಿದ್ದಾರೆ ? ಅವರು ತಮ್ಮದೇ ಆದ ಒಂದು ಪಕ್ಷವನ್ನು ಬೆಳೆಸಬೇಕಾಗಿದೆ, ಅದಕ್ಕಾಗಿ ಅವರು ಹಾಗೆ ಮಾತನಾಡುತ್ತಾರೆ. ಅಂದಾಗ ಅದರಲ್ಲಿ ರೈತನ ಹಿತಚಿಂತನೆ ಅಷ್ಟರಲ್ಲೇ ಇದೆ.

ಶ್ರೀ ಕೋಣಂದೂರು ಲಿಂಗಪ್ಪ.—ನಿಮಗೆ ಗೊಬ್ಬರ ಹೊರತಕ್ಕ ಅಭ್ಯಾಸವೇನಾದರೂ ಇಯೆದ್ದೇ ?

ಶ್ರೀ ಟಿ. ಎಂ. ಮಂಜುನಾಥ್.—ಗೊಬ್ಬರ ಹೊರತಕ್ಕ ಅಭ್ಯಾಸ ನನಗೆ ಚೆನ್ನಾಗಿದೆ. ವರ್ಷದಲ್ಲಿ ಒಂದು ತಿಂಗಳಾದರೂ ನಾನು ಆ ಅಭ್ಯಾಸದಲ್ಲಿದ್ದೇ ತೀರಬೇಕು. ನನಗೆ ಸಂಬಂಧಪಟ್ಟ ಆಸ್ತಿಯನ್ನು ಫಲವತ್ತಾಗಿ ಮಾಡುವುದಕ್ಕೆ ನಾನು ಎಷ್ಟು ಖರ್ಚುಮಾಡಿದ್ದೇನೆಂಬುದು ನನಗೇ ಗೊತ್ತು. ಆ ಜಮೀನಿನಲ್ಲಿ ಏನುಉತ್ಪತ್ತಿ ಬರುತ್ತದೋ ಅದಕ್ಕೂ ಹೆಚ್ಚಾಗಿ ಅದನ್ನ ಫಲವತ್ತಾಗಿ ಮಾಡಲು ನಾನು ಹಣವನ್ನು ಖರ್ಚುಮಾಡಿದ್ದೇನೆ. ನಿಜವಾಗಿಯೂ ಹೇಳುವುದಾದರೆ ಹಣವಂತರಾಗಿರತಕ್ಕವರಿಗೇ ಈ ದಿವಸ ತಮ್ಮ ಭೂಮಿಯನ್ನು ಫಲವತ್ತಾಗಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತಿಲ್ಲ ಅಂದಾಗ ಇನ್ನು ಬಡ ರೈತನ ಗತಿ ಏನಾಗಿರಬೇಕು ? ಆತನ ಜಮೀನು ಇನ್ನೆಷ್ಟರ ಮಟ್ಟಿಗೆ ಸಾರವಾಗಿ ಇದ್ದೀತು ? ಎಷ್ಟು ಜನರಿಗೆ ಸರಿಯಾಗಿ ಭೂಮಿಗೆ ಗೊಬ್ಬರ ಗೋಡುಗಳನ್ನು ಹಾಕಿ ವ್ಯವಸಾಯ ಮಾಡುವುದಕ್ಕೆ ಸಾಧ್ಯವಿದೆ? ಭೂಹೀನರ ಸಂಖ್ಯೆ ಲಕ್ಷಗಟ್ಟಲೆ ಇರುವಾಗ ಇವರಿಗೆಲ್ಲಾ ಹಂಚಲು ಜಮೀನಿದೆಯೇ? ಭೂಮಿಯನ್ನು ಕೊಟ್ಟರೂ ಅವರಿಗೆ ಅದನ್ನು ಉಳಿಸಿಕೊಂಡು ಸಾಗುವಳಿ ಮಾಡುವುದಕ್ಕೆ ಅವರಿಗೆ ಚೈತನ್ಯವುಂಟೇ ? ಅನೇಕರು ಈಗಾಗಲೇ ಸಾವಿರಾರು ಜನರು ಯಾರು ಹೀಗೆ ಸರ್ಕಾರದವರಿಂದ ಭೂಮಿಯನ್ನು ದರಖಾಸ್ತಿನಲ್ಲಿ ಪಡೆದುಕೊಂಡರೋ ಅಂಥವರೆಲ್ಲಾ ಅವರಿಗೆ ಮಂಜೂರು ಮಾಡಿದ ಭೂಮಿಯನ್ನು ಆರಕ್ಕೆ ಮೂರಂತೆ ಬೇರೆಯವರಿಗೆ ಮಾರಾಟ ಮಾಡಿಕೊಂಡಿದ್ದಾರೆ. ಅನೇಕರು ತಮ್ಮ ತಂದೆತಾಯಿಗಳು ಕೊಟ್ಟ ಆಸ್ತಿಪಾಸ್ತಿಗಳನ್ನು ಕೆಟ್ಟ ಆಟಕ್ಕೆ ಬಿದ್ದು ಅದನ್ನೆಲ್ಲಾ ಹಾಳುಮಾಡಿಕೊಂಡು ಸೋಮಾರಿಗಳಾಗಿ ತಿರುಗುತ್ತಿದ್ದಾರೆ. ಈ ದಿವಸ ಅಂಥವರಿಗೆ ಭೂಮಿಯನ್ನು ಕೊಟ್ಟರೆ, ಆ ಸೋಮಾರಿಗಳಿಂದ ನಿಜವಾಗಿಯೂ ಸಮಾಜ ಉದ್ಧಾರವಾಗುತ್ತದೆಯೇ! ಅಥವಾ ದೇಶ ಉದ್ಧಾರವಾಗುತ್ತದೆಯೇ ? ಹೀಗೆಲ್ಲಾ ಇರುವುದರಿಂದ ನಾವು ಏಕಾಏಕಿ ರೈತರ ಅಭಿವೃದ್ಧಿ ಸೋಗಿನಲ್ಲಿ ಈ ಬೂಮಾಲ್ದೀಕರ ಮೇಲೆ ಕೈಮಾಡುವುದ ಬೇಡ. ಅವನ ಪಾಡಿಗಾದರೂ ಅವನು ಸುಖವಾಗಿದ್ದರೆ ಸಮಾಜಕ್ಕೆ ಅಷ್ಟು ಹೊರೆ ಕಡಮೆಯಾದಂತಾಯಿತು. ಸರ್ಕಾರದವರು ತಮ್ಮ ಮನೂದೆಯಲ್ಲಿ ಒಂದು ಕಡೆ ಯಾರಿಗೆ ಹನ್ನೆರಡು ಸಾವಿರ ರೂಪಾಯಿಗಳ ವರಮಾನವಿದೆಯೋ ಅಂಥವರು ಬೇರೆ ಉದ್ಯಮದಲ್ಲಿ ಕೈ ಹಾಕಬಾರದೆಂದು ಹೇಳಿದ್ದಾರೆ. ಇದು ಎಂಥಾ ನಾಚಿಗೇಡಿನ ಮಾತಾಯಿತು.

ಉಪಾಧ್ಯಕ್ಷರು.—ಎಂಥಾ ನಾಚಿಕೆಗೇಡಿನ ಕಾರ್ಯ ಎನ್ನುವುದು ಬೇಡ. ಅದು ಒಳ್ಳೆಯದಲ್ಲ ಅಂತ ಅಷ್ಟು ಹೇಳಿದರೆ ಸಾಲದೆ ?

ಶ್ರೀ ಟಿ. ಎಂ. ಮಂಜುನಾಥ್.—ಸ್ವಾಮಿ ಅಧ್ಯಕ್ಷರೇ, ಶ್ರೀ ಶಿರನಾಳ ಚಂದ್ರಶೇಖರ್ ಅವರು ಏಕೋ ಬಹಳ ಎದ್ದೆದ್ದು ಕುಳಿತುಕೊಳ್ಳುತ್ತಿದ್ದಾರೆ. ಅವರಿಗೆ ನಾನು ಒಂದು ಸವಾಲನ್ನು

ಹಾಕುತ್ತೇನೆ. ಅದೇನೆಂದರೆ ಅವರೂ ಮತ್ತು ನಾನು ಇಬ್ಬರೂ ರಾಜೀನಾಮೆ ಕೊಟ್ಟು ಇಲ್ಲಿಂದ ವಾಪಸ್ ಹೋಗೋಣ. ಮತ್ತೆ ಅವರು ಅವರ ಕ್ಷೇತ್ರದಲ್ಲಿ, ನಾನು ನನ್ನ ಕ್ಷೇತ್ರದಲ್ಲಿ ಇಬ್ಬರೂ ಚುನಾವಣೆಗೆ ನಿಲ್ಲೋಣ. ಅವರು ಅವರ ಭೂಮಿ ಪ್ರಚಾರಮಾಡಲಿ, ನಾನು ನನ್ನ ಇಲ್ಲಿನ ವಾದವನ್ನೇ ಜನರ ಮುಂದಿಡುತ್ತೇನೆ. ಆಗ ಜನರು ಯಾರಿಗೆ ಓಟು ಕೊಟ್ಟು ಕಳುಹಿಸಿತ್ತಾರೆಂಬುದನ್ನು ನೋಡೋಣ. ಇದಕ್ಕೆ ಅವರು ಒಪ್ಪುವರೇ? ನನ್ನ ವಾದವನ್ನೇ ನಾನು ಹೊರಗಡೆಯಲ್ಲೂ ಘೋಷಣೆ ಮಾಡುತ್ತೇನೆ.

ಮಾನ್ಯ ಸದಸ್ಯರಾದ ಶ್ರೀಮಾನ್ ಶೀರನಾಳಿ ಚಂದ್ರಶೇಖರ್ ಅವರು ನಾನು ಭಾಷಣ ಮಾಡುವಾಗ ಮಧ್ಯೆ ಮಧ್ಯೆ ಪದೇ ಪದೇ ಇಂಟರಪ್ಟ್ ಮಾಡುತ್ತಿದ್ದಾರೆ. ಅದಕ್ಕೆ ತಾವು ಅನ್ಸದ ಕೊಡಬೇಡಿ. ಮಾನ್ಯ ಸದಸ್ಯರು ಹಿಂದೆ ಒಂದು ಸಾರಿ ಭಾಷಣ ಮಾಡಿದಾಗ, ಪತ್ರಿಕೆಗಳಲ್ಲಿ ಅವರನ್ನು ಸಸ್‌ಪೆಂಡ್ ಮಾಡಿದ್ದಾರೆಂದು ಬಂದಾಗ ಅವರು ಬಹಳವಾಗಿ ಹೆದರಿದ್ದರು.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನನ್ನ ಪಕ್ಷದಲ್ಲಿ ನನ್ನನ್ನು ಸಸ್‌ಪೆಂಡ್ ಮಾಡಿದ್ದಕ್ಕೂ, ಈ ರ್ಯಾಂಡ್ ರಿಫಾರಮ್ಸ್‌ಗೂ ಏನು ಸಂಬಂಧವೆಂದು ನಾನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರನ್ನು ಕೇಳಬೇಕಾಗಿದೆ.

ಶ್ರೀ ಟಿ. ಎಂ. ಮಂಜುನಾಥ್.—ನಾನು ನನ್ನ ಕ್ಷೇತ್ರದಿಂದ ಸಂಸ್ಥಾ ಕಾಂಗ್ರೆಸ್ ಪಕ್ಷಿಯಿಂದ ಇಲ್ಲಿಗೆ ಆರಿಸಿ ಬಂದಿದ್ದೇನೆ. ಮಾನ್ಯ ಶ್ರೀ ಶೀರನಾಳಿ ಚಂದ್ರಶೇಖರ್ ಅವರಾದರೋ ಶ್ರೀಮತಿ ಇಂದಿರಾ ಗಾಂಧಿಯವರ ತತ್ವಗಳನ್ನು ಅನುಸರಿಸುವವರು. ನನ್ನ ಕ್ಷೇತ್ರದ ಜನಗಳು ಶ್ರೀಮತಿ ಇಂದಿರಾ ಗಾಂಧಿಯವರ ತತ್ವಗಳ ಮೇಲೆ ನಂಬಿಕೆ ಇಲ್ಲದೆ ಸುಮಾರು 17–18 ಸಾವಿರ ಮತಗಳನ್ನು ನನಗೆ ಕೊಟ್ಟು ಇಲ್ಲಿಗೆ ಕಳಿಸಿದ್ದಾರೆ. ಅವರ ತತ್ವಗಳನ್ನು ಅನುಸರಿಸುತ್ತಾ ಇರುವವರಲ್ಲಿ ಎಲ್ಲಾ ಆಷಾಡಭೂತಿ ನಂಬಿಕೆ ಎಂಬುದು ನನಗೆ ಚೆನ್ನಾಗಿ ಗೊತ್ತಿದೆ. ಅದನ್ನು ನಾಗಮಂಗಲ ವಿಧಾನಸಭಾ ಕ್ಷೇತ್ರದ ಚುನಾವಣೆಯಲ್ಲಿ ಪೊನ್ನೆತಾನೆ ಅಲ್ಲಿನ ಜನತೆ ಬಹಳ ಚೆನ್ನಾಗಿ ತೋರಿಸಿ ಕೊಟ್ಟಿದ್ದಾರೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಮಾನ್ಯ ಸದಸ್ಯರು 'ಆಷಾಡಭೂತಿ' ಎಂದು ಹೇಳಿದರು. ಶ್ರೀಮತಿ ಇಂದಿರಾಗಾಂಧಿಯವರ ತತ್ವವನ್ನು ಆಷಾಡಭೂತಿ ತತ್ವವೆಂದು ಕರೆದಿದ್ದಾರೆ. ಅದನ್ನು ಸಭೆಯ ನಡೆವಳಿಕೆಗಳಿಂದ ಎಕ್ಸ್‌ಪಂಜ್ ಮಾಡಬೇಕೆಂದು ನಾನು ಸಲಹೆಮಾಡುತ್ತೇನೆ.

Mr. DEPUTY SPEAKER.—Why is the member getting touchy about it? I know what is to be expunged. This is parliamentary debate. He cannot expect a tame dabate.

ಶ್ರೀ ಟಿ. ಎಂ. ಮಂಜುನಾಥ್.—ಸರ್ಕಾರ ಈಗ ತಂದಿರುವ ಈ ಭೂಸುಧಾರಣೆಯ ತಿದ್ದುಪಡಿಯ ಬಗ್ಗೆ ನಾನು ಬಹುಶಃ ಗಂಟೆಗಟ್ಟಲೆ ಮಾತನಾಡಬೇಕೆಂದಿದ್ದೆನು. ಆದರೆ ನನ್ನ ಮಾನ್ಯ ಸ್ನೇಹಿತರು ನಾನು ಭಾಷಣಮಾಡುವಾಗ ಪದೇ ಪದೇ ಇಂಟರಪ್ಟ್ ಮಾಡುತ್ತಿರುವುದರಿಂದ ಅನೇಕ ವಿಷಯಗಳು ನನಗೆ ಮರೆತುಹೋಗುತ್ತವೆ.

ಇನ್ನು ಸರ್ಕಾರದವರು ಈ ಭೂಸುಧಾರಣೆಯ ಕಾನೂನುಗಳನ್ನು ಜಾರಿಗೆ ತರುವಾಗ ಬಹಳವಾಗಿ ಯೋಚನೆ ಮಾಡಬೇಕು. ಇವತ್ತಿನ ದಿವಸ ನಮ್ಮ ದೇಶದ ಜನತೆ ಬಹಳ ಕಂಗೆಟ್ಟಿದ್ದಾರೆ. ಸರ್ಕಾರ ಎಲ್ಲೆಲ್ಲಿ ಯಾವ್ಯಾವ ಕಾಲದಲ್ಲಿ ಏನೇನು ಹೇಳಿಕೆಗಳನ್ನು ಕೊಡುತ್ತಾರೋ ಅದರ ಬಗ್ಗೆ ಹೆಚ್ಚು ನಿಗಾ ಇಡಬೇಕು. ಏಕೆಂದರೆ ಇತ್ತೀಚೆಗೆ ರೈತಾಪಿ ಜನಗಳಿಗೆ ಭೂಮಿಯ ಮೇಲೆ ತಮ್ಮ ಹತೋಟಿ ಇಲ್ಲ, ನಂಬಿಕೆ ಇಲ್ಲ, ತಮ್ಮ ಆಸ್ತಿಪಾಸ್ತಿಗಳ ಬಗ್ಗೆಯೂ ಏನು ಹತೋಟಿ ಇಲ್ಲವೆಂದು ಹೇಳುವ ಪರಿಸ್ಥಿತಿ ಬಂದಿದೆ. ಆದ್ದರಿಂದ ಅಂತಹವರ ರಕ್ಷಣೆಯನ್ನು ಈ ಸಭೆಯ ಸದಸ್ಯರೆಲ್ಲರೂ ಕಾನೂನು ಪ್ರಕಾರ ಸರ್ಕಾರದ ಮೂಲಕ ಮಾಡಿಸುವುದು ಅವರ ಕರ್ತವ್ಯವೆಂದು ನಾನು ಹೇಳುತ್ತೇನೆ. ಇಲ್ಲದಿದ್ದರೆ, ಇವರ ಈ ಒಂದು ಭೂಸುಧಾರಣೆಯ ಕಾರ್ಯಕ್ರಮದಲ್ಲಿ ಗರಿಭಿ ಹಟಾವೋ ಎಂಬ ಒಂದು ತತ್ವವನ್ನು ಏನು ಇಟ್ಟುಕೊಂಡಿದ್ದಾರೋ ಅದು ಖಂಡಿತವಾಗಿ ಯಶಸ್ವಿಯಾಗಲಾರದು. ನಾನು ಹೇಳಿದ ಹಾಗೆ ಯಾವರೀತಿಯಲ್ಲಾದರೂ ಭೂಮಾಲೀಕರಾಗತಕ್ಕವರು ಕೇವಲ 10–15 ಎಕರೆಯವರೆಗೆ ಜಮೀನು ಪಡೆದು ಅದನ್ನು ಒಂದು ಸ್ಯಾಂಡರ್ಡ್ ಎಕರೆ ಎಂಬುದಾಗಿ ಪರಿಗಣಿಸಬೇಕಾಗಿ ಸರುವುದರಿಂದ, ಅಂತಹವರು ತನ್ನ ಮಕ್ಕಳಿಗೆ ಸರಿಯಾದ ರೀತಿಯಲ್ಲಿ ವಿದ್ಯಾಭ್ಯಾಸ ಕೊಡಿಸಿಕೊಂಡು, ಎರಡು ಹೊತ್ತು ಊಟಮಾಡಿಸುವುದಕ್ಕೆ ತಕ್ಕಶಕ್ತಿ, ಸಾಮರ್ಥ್ಯ ಪಡೆಯುವ ಅವಕಾಶವನ್ನು ಮಾಡಿಸಿ ಕೊಡಬೇಕು. ಅಂತಹ ಒಂದು ಅವಕಾಶವನ್ನು ನಾವೆಲ್ಲರೂ ಸೇರಿ ಈ ಸರ್ಕಾರದಿಂದ ಮಾಡಿಸಿಕೊಡುವುದು ನಮ್ಮೆಲ್ಲರ ಆದ್ಯಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಹೀಗೆ ಒಂದು

(ಶ್ರೀ ಟಿ. ಎಂ. ಮಂಜುನಾಥ್)

ವೇಳೆ ಸರ್ಕಾರದವರು ಭೂಮಾಲೀಕತ್ವದಲ್ಲಿ ಒಂದು ಮಿತಿಯನ್ನು ಹಾಕಿದಾಗ ಅನೇಕ ರೀತಿಯಲ್ಲಿ ಉತ್ಪಾದನೆ ಮಾಡತಕ್ಕ ಸರಕುಗಳನ್ನು ಕೊಂಡುಕೊಳ್ಳತಕ್ಕ ಶಕ್ತಿ, ರೈತರಿಗೆ ಇರುವುದಿಲ್ಲ. ಅಂದಮೇಲೆ ಪಟ್ಟಣಗಳಲ್ಲಿರತಕ್ಕ ನಾಗರೀಕ ಸೌಲಭ್ಯಗಳನ್ನು ಹಾಗೂ ಅನೇಕ ಸಾಧನೆಗಳನ್ನು ಹಳ್ಳಿಯಲ್ಲಿರತಕ್ಕ ರೈತಾಪಿ ಜನಗಳೂ ಸಹ ಉಪಯೋಗಿಸುವ ಅರ್ಹತೆ ಇಲ್ಲವೇ? ಯಾರು ಭೂಮಿಯನ್ನು ಸಾಗುವಳಿ ಮಾಡುತ್ತಾನೋ, ಹೊಚ್ಚೆಪಾಡಿಗೋಸ್ಕರವಾಗಿ ಆಹಾರವನ್ನು ಬೆಳೆಯುತ್ತಾನೋ ಅವನೂ ಸಹ ಪಟ್ಟಣವಾಸಿಗಳಂತೆ ಬಸ್ಸುಗಳಲ್ಲಿ, ಕಾರುಗಳಲ್ಲಿ ಓಡಾಡ ಬೇಡವೇ? ಅವನೂ ಸಹ ಸೊಗಸಾಗಿ ಜೀವನಮಾಡುವುದಕ್ಕೊಸ್ಕರವಾಗಿ ಒಂದು ಪರಿಪೂರ್ಣವಾದ ಅವಕಾಶವನ್ನು ಕೊಂದುವುದಕ್ಕೆ ಇಂತಹ ಒಂದು ಮಿತಿಯಿಂದ ಸಾಧ್ಯವೇ ಎಂಬುದನ್ನು ತಾವು ಯೋಚನೆ ಮಾಡಬೇಕು. ಆದ್ದರಿಂದ ನಾನು ಸರ್ಕಾರದವರಿಗೆ ಮತ್ತೊಮ್ಮೆ ಒಂದು ವಿಚಾರವನ್ನು ಒತ್ತಾಯ ಮಾಡುತ್ತೇನೆ. ಈ ಮಸೂದೆಯನ್ನು ಜಾರಿಗೆ ತರುವುದಕ್ಕೆ ಮುಂಚೆ ಈ ವಿಷಯ ಗಳನ್ನೆಲ್ಲಾ ಕೂಲಂಕಷವಾಗಿ ಸರ್ಕಾರದವರು ಯೋಚನೆ ಮಾಡಬೇಕು. ಈಗ ತಾವೇನು ಭೂ ಪರಿಮಿತಿಯನ್ನು ನಿಗದಿ ಮಾಡಿದ್ದೀರಿ, ಆದರಿಂದ ರೈತನಾದವನು ಪರಿಪೂರ್ಣವಾದ ಜೀವನ ನ್ನು ಮಾಡಲು ತಕ್ಕ ಸಾಧನೆಗಳನ್ನು ಹೊಂದಿಕೊಳ್ಳುವುದಕ್ಕೆ ಒಂದುವೇಳೆ ಅವಕಾಶವಿಲ್ಲದೇ ಹೋದರೆ, ಸರ್ಕಾರದವರು ಅದಕ್ಕಾಗಿ ಹೆಚ್ಚಿನ ಜವಾಬ್ದಾರಿಯಿಂದ ಒಂದು ಸೂಕ್ತ ಕಾನೂನನ್ನು ಅಳವಡಿಸು ವುದು ಬಹಳ ಮುಖ್ಯವೆಂದು ನಾನು ಹೇಳಬಯಸುತ್ತೇನೆ. ಆದರೆ ಯಾವ ಒಂದು ಜವಾಬ್ದಾರಿ ಯನ್ನು ಸರ್ಕಾರ ತೆಗೆದುಕೊಳ್ಳದೆ ರೈತನಾದವನನ್ನು ಬೇಕಾಬಿಟ್ಟಿಯಾಗಿ ಕಂಡು, ಈ ರೀತಿಯಾಗಿ ಭೂಪರಿಮಿತಿಯನ್ನು ನಿಗದಿಮಾಡುವುದಾದರೆ, ಆದರಿಂದ ಅವನ ಮಕ್ಕಳು, ಭೂಮಿಯನ್ನೇ ನಂಬಿಕೊಂಡು ಜೀವನಮಾಡುವಂತಹವರು, ನಿಜವಾಗಿಯೂ ತುಂಬಾ ತೊಂದರೆಗೊಳಗಾಗುತ್ತಾರೆ. ಇದರಿಂದ ಈ ಸರ್ಕಾರಕ್ಕೆ, ಹಾಗೂ ಇಡೀ ದೇಶಕ್ಕೆ ಅಗೌರವ, ಮೋಸ, ವಂಚನೆ ಮಾಡಿದಂತಾ ಗುತ್ತದೆಂದು ನಾನು ಭಾವಿಸಿಸ್ತೇನೆ. ನಾನು ಮಾತನಾಡುತ್ತಿರುವುದನ್ನು ನೋಡಿ, ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರು ಏನೋ ನಗುತ್ತಾ ಇದ್ದಾರೆ ಅವರು ಈ ಭೂಸುಧಾರಣೆಯ ಬಗ್ಗೆ ಎಷ್ಟರಮಟ್ಟಿಗೆ ಯಶಸ್ವಿಯಾಗುತ್ತಾರೋ ನನಗೆ ಗೊತ್ತಿಲ್ಲ. ಈ ಭೂಸುಧಾರಣೆಯನ್ನು ರಿಟ್ರಾಸ್ಪೆಕ್ಟಿವ್ ಆಗಿ ಜಾರಿಗೆ ತರಬೇಕೆಂದು ಮಾಡಿದ್ದಾರೆ ಇದನ್ನು ಕೆಲವರು ಬಹಳ ಒಳ್ಳೆಯದು ಎಂದು ಹೇಳಿದ್ದಾರೆ, ಮತ್ತೆ ಕೆಲವರು ಅದನ್ನು ಒಳ್ಳೆಯದಲ್ಲವೆಂದು ಹೇಳಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇದು ಕೂಡದು ಎಂದು ಹೇಳಬೇಕಾಗಿದೆ. ಯಾರು ಏಕವ್ಯಕ್ತಿಯಿಂದ ಜೀವನ ಮಾಡತಕ್ಕ ಅವಿಭಕ್ತ ಕುಟುಂಬಗಳಿಗೆ ರಕ್ಷಣೆ ಕೊಟ್ಟಿದ್ದಾರೋ ಅವರಿಗೆ ಕಾನೂನುಗಳ ಅರಿವೇ ಗೊತ್ತಿಲ್ಲ. ನಾಗರಿಕ ಜನ ಇದರಲ್ಲಿಯೂ ಪಟ್ಟಣದಲ್ಲಿರತಕ್ಕವರು ಈಗಾಗಲೇ ತಮ್ಮ ಆಸ್ತಿಪಾಸ್ತಿ ಗಳನ್ನು ಮಾರುತ್ತಿದ್ದಾರೆ. ನಮ್ಮಾಜದಲ್ಲಿ ಯಾರು ಬುದ್ಧಿವಂತರಾಗಿ ಸಮಾಜದಲ್ಲಿ ಮತ್ತೊಂದು ಕ್ಷೇತ್ರದಲ್ಲಿಯೂ ಬೇರೆಬೇರೆ ರೀತಿಯಲ್ಲಿ ಪರಿಹಾರ ತೆಗೆದುಕೊಳ್ಳಬೇಕೆಂದು ಇರುತ್ತಾರೋ ಅಂತಹ ವರಿಗೆ ನೀವು ರಕ್ಷಣೆ ಕೊಟ್ಟು ಏನೂ ತಿಳಿಯದೆ ಇರತಕ್ಕ ಮುಗ್ಧಜೀವಿಗಳಿಗೆ ಏಕೆ ಶೋಷಣೆ ಮಾಡುತ್ತೀರೋ ಗೊತ್ತಿಲ್ಲ. ಆದ್ದರಿಂದ ಅಂತಹವರಿಗೆ ರಿಟ್ರಾಸ್ಪೆಕ್ಟಿವ್ ಎಫ್‌ಕ್ಟ್ ಏತಕ್ಕೆ ಬೇಕು! ನಾನು ಹೇಳುವುದಿಷ್ಟೆ, ಅಂತಹವರಿಗೆ ನಿಜವಾಗಿ ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಬೇಡ. ಈಗಿನ ಜನಗಳಿಗೆ ಕಾನೂನುಗಳ ಅರಿವಿನ ಬಗ್ಗೆ ತಿಳುವಳಿಕೆ ಹೇಳಬೇಕು. ಅವಿಭಕ್ತ ಕುಟುಂಬಗಳಿಗೆ ಮೇಜರ್ ಮಕ್ಕಳ ಬಗ್ಗೆ ಯಾವರೀತಿಯಲ್ಲಿ ಕಾನೂನಲ್ಲಿ ಮಿತಿಯನ್ನು ಅಳವಡಿಸಿಕೊಂಡಿದ್ದೀರೋ ಅದು ಸರಿಯಾದ ಮಾರ್ಗವೇ? ಅದನ್ನು ಈ ಕಾನೂನಿನಲ್ಲಿ ಅರ್ಥಹೀನವಾಗಿ ಸರ್ಕಾರದವರು ತಂದಿದ್ದಾರೆ. ಇದರಿಂದ ಜನತೆಗೆ ಬಹುಶಃ ಸರ್ಕಾರದ ಮೇಲೆ ಇರತಕ್ಕ ನಂಬಿಕೆ ಹೋಗಿ ನಾನು ಮೊದಲೇ ಹೇಳಿದಹಾಗೆ ಒಂದು ದೊಡ್ಡ ಕ್ರಾಂತಿಯೇ ಆಗುವುದು ಖಂಡಿತವೆಂದು ಹೇಳುತ್ತೇನೆ. ಯಾರೇ ಆಗಿರಲಿ, ಎಂತಹವನೇ ಆಗಿರಲಿ, ಭೂಮಿಯನ್ನು ತನ್ನ ತಾಯಿಗಿಂತಲೂ ಹೆಚ್ಚಿಗೆ ನೋಡಿಕೊಂಡಿರುತ್ತಾನೆ. ಈಗಾಗಲೇ ಇದರ ಬಗ್ಗೆ ಅನೇಕ ಕೋರ್ಟ್‌ಕಚೇರಿಗಳಲ್ಲಿ ಬೇಕಾದಷ್ಟು ಕೇಸುಗಳಿವೆ. ಹಿಂದೆಯೆಲ್ಲಾ ಒಂದು ಅಡಿ ಜಾಗಕ್ಕೆ ಎಷ್ಟೋ ಕೊಲೆ, ದರೋಡೆಗಳು ಆಗಿವೆ. ಭೂಮಿಯ ಮೇಲೆ ಅಷ್ಟೊಂದು ಪ್ರೀತಿ, ಪಾತ್ಸಲ್ಯ ಇಟ್ಟುಕೊಂಡಿರವವರ ಬಗ್ಗೆ ಸರ್ಕಾರ ಆ ರೀತಿಯಾಗಿ ಈ ಕಾನೂನಲ್ಲಿ ಬದಲಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಅದು ಸ್ವಲ್ಪ ಕಷ್ಟ ವಾಗುತ್ತದೆ. ಆದ್ದರಿಂದ ಈಗ ಈ ಭೂಸುಧಾರಣೆಯನ್ನು ಜಾರಿಗೆ ತರಬೇಕಾದರೆ ಸರ್ಕಾರದವರು ತುಂಬಾ ಎಚ್ಚರಿಕೆಯಿಂದ ಇದರ ಬಗ್ಗೆ ಕ್ರಮಗಳನ್ನು ತೆಗೆದುಕೊಳ್ಳಬೇಕು, ಇವತ್ತು ಪಟ್ಟಣಗಳಲ್ಲಿ ಇರತಕ್ಕ ಒಬ್ಬ ವ್ಯಾಪಾರಸ್ಥ, ತಿಂಗಳಿಗೆ ಮೂರು-ನಾಲ್ಕು ಸಾವಿರ ರೂಪಾಯಿಗಳ ವರಮಾನ ಬರತಕ್ಕ ಒಬ್ಬ ಅಧಿಕಾರಿ ಸುಂದರವಾದಂಥ ಬಂಗಲೆಗಳಲ್ಲದ್ದುಕೊಂಡು ಒಂದು ಭೋಗ್ಯವಾದ

ನುಭ ಜೀವನವನ್ನು ನಡೆಸುತ್ತಿರುವಾಗ, ಅಷ್ಟುಮಟ್ಟಿಗೆ ಅಂತಹ ಜೀವನವನ್ನು ನಡೆಸುವ ಅವಕಾಶವನ್ನು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಒದಗಿಸಿಕೊಡುವುದು ಸರ್ಕಾರದ ಮೂಲ ಕರ್ತವ್ಯ. ಈ ಪ್ರಜಾಪ್ರಭುತ್ವದಲ್ಲಿ ಅದರಲ್ಲಿಯೂ ಮಹಾತ್ಮ ಗಾಂಧೀಜಿಯವರು ಪರಿಪಾಲಿಸುತ್ತಿದ್ದ ತತ್ವಗಳ ಪ್ರಕಾರ ಈ ದೇಶದಲ್ಲಿ ಎಲ್ಲರೂ ಸಂತೋಷವಾಗಿರಬೇಕೆಂಬುದು ಮೂಲ ತತ್ವವಾಗಿದೆ. ಈ ದಿವಸ ಈ ರೀತಿಯಾಗಿ ಹೇಳುವವರೇ ನಾವು. ನಿಜವಾಗಿಯೂ ಸುಖವಾದ ಭೋಗ ಜೀವನವನ್ನು ನಡೆಸುತ್ತಿದ್ದೇವೆ. ಬಡ ಬೋರೇಗೌಡ ಬೆಳದಂಥ ಪದಾರ್ಥಗಳನ್ನು ಶೇಖರಿಸಿಕೊಂಡು ಕೇವಲ ಕಾಳು, ರೊಟ್ಟಿ ತಿನ್ನುತ್ತಿದ್ದಾನೆ. ಇಂತಹ ಒಂದು ಸನ್ನಿವೇಶ ಈ ಒಂದು ಕಾನೂನಿನಿಂದ ವ್ಯಕ್ತಪಡುತ್ತಿದೆಯೆಂದು ನಾನು ಅತ್ಯಂತ ಕಳಕಳಿಯಿಂದ ಸರ್ಕಾರದವರನ್ನು ಪ್ರಾರ್ಥನೆ ಮಾಡುತ್ತೇನೆ. ಆದ್ದರಿಂದ ಈ ಭೂಸುಧಾರಣೆಯನ್ನು ಜಾರಿಗೆ ತರುವುದಕ್ಕೆ ಮುಂಚೆ ಮತ್ತೊಮ್ಮೆ ಪರಿಶೀಲನೆ ಮಾಡಲಿ. ಇವೊತ್ತಿನ ದಿವಸ ಹಳ್ಳಿಗಳಲ್ಲಿರುವ ತಕ್ಕಂತಹ ರೈತರ ಪರಿಸ್ಥಿತಿ ಏನಿದೆ ಎಂಬುದನ್ನು ಮೊದಲು ವಿಚಾರಿಸಬೇಕು. ನಾನಾದರೂ ಹೇಳುತ್ತೇನೆ—ಇದು ಬಡ ರೈತರ ಸುಧಾರಣೆಗೋಸ್ಕರ ಕಂದಿರತಕ್ಕಂತಹ ಮನೂದೆಯಲ್ಲ.

ಇನ್ನೊಂದು ವಿಚಾರವೇನೆಂದರೆ, ಸರ್ಕಾರದ ಪ್ರಶದಲ್ಲಿರತಕ್ಕಂತಹ ಹಲವು ಜಮೀನನ್ನು ಸರ್ಕಾರದವರು ಮಂಜೂರು ಮಾಡಿದ್ದಾರೆ. ಆ ಜಮೀನುಗಳ ಅವಸ್ಥೆ ಇವತ್ತು ಏನಾಗಿದೆ? ಆದನ್ನು ಯಾರು ಅನುಭವಿಸುತ್ತಾ ಇದ್ದಾರೆ! ಸರ್ಕಾರದ ಜಮೀನನ್ನು ಕೊಟ್ಟು ಅದರಿಂದ ಉತ್ಪನ್ನ ಸರಿಯಾಗಿ ಪಡೆಯುವುದಕ್ಕೆ ಆಗದಿದ್ದರೆ ಪಾಪ ಬಡ ರೈತರ ಭೂಮಿಯನ್ನು ಏಕೆ ಕಿತ್ತುಕೊಂಡು ಹಿಂಸೆ ಕೊಡುತ್ತೀರಿ? ಆದ್ದರಿಂದ ಮೊದಲು ಇದನ್ನು ಪುನಃ ಪರಿಶೀಲನೆ ಮಾಡುವುದು ಕ್ಯೋಸ್ಕರ ಗೌರವದಿಂದ ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ವಿ. ಎನ್. ಪಾಟೀಲ್. —ನೀವು ಸೀಲಿಂಗ್ ಲಿಮಿಟ್ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಟಿ. ಎಂ. ಮಂಜುನಾಥ್. —ನಿಮ್ಮ ಆಡಳಿತ ಕಾಂಗ್ರೆಸ್ಸಿಗೆ ಕೇಂದ್ರದಿಂದ 1¼ ಎಕರೆ ಇಡಿ ಎಂದು ಹೇಳಿದ್ದಾರೆ. ಆದ್ದರಿಂದ ನಾನು ಹೇಳುವುದು ಅದನ್ನು 15 ರಿಂದ 18 ಸ್ಟಾಂಡರ್ಡ್ ಎಕರೆ ಎಂದು ಮಾಡಲಿ. ದೇವರು ಕೊಟ್ಟ ಭೂಮಿಯನ್ನು ಏಕೆ ಕಿತ್ತುಕೊಳ್ಳುತ್ತೀರಿ?

ಇನ್ನು ತೆಂಗಿನ ತೋಟದ ಬಗ್ಗೆ ಹೇಳುವುದಾದರೆ, ತೆಂಗಿನ ತೋಟ ಮತ್ತು ಅಡಿಕೆ ತೋಟವನ್ನು ಒಂದುಗೂಡಿಸುವುದು ಬೇಡ. ಇವತ್ತು ತೆಂಗಿನ ತೋಟವು ದೇವರು ಕೊಟ್ಟ ವಾಯುಗನು ಗುಣವಾಗಿ ಬೆಳೆದು ಬರತಕ್ಕಂತಹ ನಿದರ್ಶನಗಳು ಇವೆ. ಅಲ್ಲದೆ ಒಂದು ತೆಂಗಿನ ತೋಟದಿಂದ ಫಲವನ್ನು ಪಡೆಯಬೇಕಾದರೆ ಮೊದಲು ರೈತನು 12 ವರ್ಷ ಅದನ್ನು ಸಾಕಿ, ನಲಹಿ ರಕ್ಷಣೆ ಮಾಡಿ ಬೆಳೆಸಬೇಕಾಗುತ್ತದೆ. ಆಮೇಲೆ ಮಾತ್ರ ಆದರಿಂದ ಲಾಭವನ್ನು ಪಡೆಯುತ್ತಾನೆ. ಆದ್ದರಿಂದ ಸರ್ಕಾರದವರು ಇದರ ಬಗ್ಗೆ ಏನೊಂದು ಸ್ಟಾಂಡರ್ಡ್ ಎಕರೆ ಮಾಡಿದ್ದಾರೆ, ಅದು ಸರಿಯಾಗಿದೆ ಎಂದು ಹೇಳುತ್ತೇನೆ. ಆದರೆ ನೀರಾವರಿಯಿಂದ ಏನು ತೆಂಗಿನ ತೋಟಗಳನ್ನು ಮಾಡಿದ್ದಾರೆ, ಅದರ ಬಗ್ಗೆ ಬೇಕಾದರೆ ಬೇರೆ ರೀತಿಯಲ್ಲಿ ಸ್ಟಾಂಡರ್ಡ್ ಎಕರೆಯನ್ನು ನಿಗದಿ ಮಾಡಬಹುದು. ಆದ್ದರಿಂದ ಗರೀಬಿ ಹಟಾವೊ ಮಾಡಬೇಕೆಂದು ಏನು ಈ ಭೂಸುಧಾರಣೆಯನ್ನು ತಂದಿದ್ದಾರೆ, ಇದರಿಂದ ಗರೀಬಿ ಹಠಾವೊ ಮಾಡುವ ಬದಲು ಗರೀಬಿ ಬಡಾವೋ ಮಾಡುತ್ತಾರೆಂದು ನಾನು ಹೇಳುತ್ತೇನೆ. ಬೇಕಾದರೆ ಇವರು ಮೈಸೂರು ರಾಜ್ಯದಲ್ಲಿರತಕ್ಕ ಭೂಮಾಲೀಕರ ಅಂಕಿ ಅಂಶಗಳನ್ನು ತಂದು ನೋಡಲಿ; ಮತ್ತು ಯಾವ ವರ್ಗದ ಜನರಲ್ಲಿ ಹೆಚ್ಚು ಭೂಮಿ ಇದೆಯೆಂಬುದನ್ನು ಸಹ ನೋಡಿ ಪರಿಶೀಲನೆ ಮಾಡಲಿ. ಅದೇ ರೀತಿ ಇದನ್ನು ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಆಗಿ ಜಾರಿಗೆ ಕೊಡಬಾರದು ಎಂದು ಹೇಳುತ್ತೇನೆ. ಇನ್ನು 12 ಸಾವಿರ ರೂಪಾಯಿ ವರಮಾನ ಎಂದು ಏನು ಇಟ್ಟಿದ್ದಾರೆ ಅದನ್ನು ತೆಗೆದು ಹಾಕಬೇಕು. ಆ ಮೇಲೆ 16 ಕಿಲೋ ಮೀಟರ್ ದೂರ ಎಂದು ಏನು ಹಾಕಿದ್ದಾರೆ ಅದನ್ನು ಸಹ ತೆಗೆದುಹಾಕಬೇಕು. ಕೊನೆಯದಾಗಿ ಈ ಒಂದು 15 ಸ್ಟಾಂಡರ್ಡ್ ಎಕರೆಗೆ ಏರಿಸುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳಿದರೆ ಮಾನ್ಯ ಮಿತ್ರರಾದ ತಿಮ್ಮಪ್ಪ ನವರು, ಲಿಂಗಪ್ಪನವರು ಹಾಗೂ ಪಾಟೀಲರು ಒಪ್ಪುತ್ತಾರೆಂದು ಭಾವಿಸುತ್ತೇನೆ. ಇಷ್ಟು ಹೇಳಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4-30 P.M.

† ಶ್ರೀ ಎಚ್. ಬಿ. ಕೆಂಚೇಗೌಡ (ಕೃಷ್ಣರಾಜನಗರ).—ಮಾನ್ಯ ಅಧ್ಯಕ್ಷರೇ ಭೂಸುಧಾರಣೆ ವಿಧೇಯಕದ ವಿಚಾರದಲ್ಲಿ ಮಾತನಾಡುವುದಕ್ಕೆ ಮೊದಲು ನಾನು ಈ ಸದನದ ಸದಸ್ಯರ ಗಮನಕ್ಕೆ ತಿಳಿಸಲಿಚ್ಛಿಸುವುದೇನೆಂದರೆ ಅನೇಕ ವಿರೋಧ ಪಕ್ಷದ ಮಾನ್ಯ ಸದಸ್ಯರು ಈ ಭೂಸುಧಾರಣೆ

(ಶ್ರೀ ಹೆಚ್. ಬಿ. ಕೆಂಚೇಗೌಡ)

ವಿಧೇಯಕದ ವಿಚಾರದಲ್ಲಿ ನಮ್ಮ ಆಡಳಿತ ಪಕ್ಷದಲ್ಲಿ ಭಿನ್ನಾಭಿಪ್ರಾಯ ಇದೆ ಎನ್ನುವ ವಿಚಾರವನ್ನು ಆಗಾಗ್ಯೆ ಹೇಳುತ್ತಾ ಇರುತ್ತಾರೆ. ಈ ಒಂದು ವಿಚಾರದಲ್ಲಿ ಭಿನ್ನಾಭಿಪ್ರಾಯ ಯಾವಭಾಗದಲ್ಲಿ ಇದೆ, ಎಷ್ಟು ಇದೆ ಎನ್ನುವ ವಿಚಾರವನ್ನು ನಾನು ಮೊದಲು ಈ ಸದನದ ಗಮನಕ್ಕೆ ತರುವುದಕ್ಕೆ ಇಷ್ಟ ಪಡುತ್ತೇನೆ. ಈಗ ಭಿನ್ನಾಭಿಪ್ರಾಯ ಕೇಂದ್ರ ಸರ್ಕಾರದವರು ಕೊಟ್ಟಿರತಕ್ಕ ಆದೇಶವನ್ನು ಮೊರಿ, ಮಿತಿಯನ್ನು ಮೊರಿ ಭೂಸುಧಾರಣೆಯ ವಿಚಾರದಲ್ಲಿ ಮಿತಿಗೊಳಿಸುವುದಕ್ಕೆ ಹೋಗುವ ಹಾಗಿಲ್ಲ. ಕೇಂದ್ರದ ಸರ್ಕಾರದವರು ಕೊಟ್ಟಿರುವ ಆದೇಶ ಈ ರೀತಿ ಇದೆ:

> "The ceiling for a family of five members may be fixed within the range of 10 to 18 acres of perennially irrigated land or irrigated land capable of growing two crops. As soil conditions, productivity of land, nature of crop grown, etc., vary from State to State and within the same State from region to region, the Committee considered it desirable simply to indicate a range within which the ceiling sholud be fixed instead of suggesting any rigid ceilings for the whole country. For various other categories of land conversions, ratios should be fixed talking into account availability of water, productivity, soil classification, crops grown, etc. The absolute ceiling for a family of five even in the case of dry lands, should be put at 54 acres. This limit would be relaxable if there is special justification for doing so on account of the nature of soil, rainfall, chronic drought conditions, etc."

ಇದು ಕೇಂದ್ರ ಸರ್ಕಾರದ ಸಮಿತಿಯವರು ನಮಗೆ ಕೊಟ್ಟಿರುವ ಆದೇಶ. ನಾವು ಏನಾದರೂ ಸಹ ನಮ್ಮ ಪಾರ್ಟಿಯವರು, ಕೇಂದ್ರ ಸರ್ಕಾರದವರು ಏನು ಆದೇಶವನ್ನು ಕೊಟ್ಟಿದ್ದಾರೆಯೋ ಆ ಪ್ರಕಾರ ಅದನ್ನು ಮಿತಿಗೊಳಿಸುವುದರಲ್ಲಿ ಒಂದು ಬೆಳೆ ಕೊಡತಕ್ಕದ್ದು 10 ರಿಂದ 18 ಸ್ಕ್ವಾಯಂಡರ್ಡ್ ಎಕರೆ ಜಮೀನು ಇರಬಹುದು, ಒಂದು ಬೆಳೆ ಕೊಡತಕ್ಕದ್ದು 27 ಎಕರೆ ಜಮೀನು ಇರಬಹುದು ಖುಷ್ಕಿ ಜಮೀನು 54 ಎಕರೆ ಇರಬಹುದು, ಈ ಸಿಲಿಂಗ್ ಲಿಮಿಟ್‌ಗಿಂತ ಹೆಚ್ಚು ಭೂಮಿಯನ್ನು ಇಟ್ಟು ಕೊಳ್ಳಬೇಕಾದರೆ ಸ್ಪೆಷಲ್ ಕೇಸಿನಲ್ಲಿ ಆಯಾ ಸಂದರ್ಭಕ್ಕನುಸಾರವಾಗಿ ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಅನುಮತಿಯನ್ನು ಪಡೆದು ಇಷ್ಟು ಇಟ್ಟುಕೊಳ್ಳಬಹುದು ಎಂದು ನಿರ್ಧಾರ ಮಾಡಬಹುದು ಎಂದು ಎನ್ನುವ ಆದೇಶ ನಮಗೆ ಇದೆ. ಕೇಂದ್ರ ಸರ್ಕಾರದವರು 10–18 ಸ್ಕ್ವಾಯಂಡರ್ಡ್ ಎಕರೆ ಎಂದು ಏನು ಹೇಳಿದ್ದಾರೆ ಆ ಮಾತಿಗೆ ಮೊರಿ ನಾವು ಮಾತನಾಡುವ ಹಕ್ಕು ಇಲ್ಲ.

ಎರಡನೆಯದಾಗಿ ಕಾಂಗ್ರೆಸ್ ಪಾರ್ಟಿಯಲ್ಲಿ ಈ ವಿಷಯದಲ್ಲಿ ವಿಚಾರ ವಿನಿಮಯವಾಗಿ ಚರ್ಚೆಯಾಗಿ ಅವರು ಕೊನೆಗೆ ಯಾವ ತೀರ್ಮಾನಕ್ಕೆ ಬರುತ್ತಾರೆಯೋ ಅದಕ್ಕೆಲ್ಲಾ ನಾವು ಬದ್ಧರಾಗಿದ್ದೇವೆ ಎಂದು ವಿರೋಧ ಪಕ್ಷದವರು ತಿಳಿದ ಕೊಳ್ಳಬೇಕು. ಯಾವುದಕ್ಕೇ ಆದರೂ ನಮ್ಮ ಪಾರ್ಟಿಯವರು ಕೊನೆಗೆ ಏನು ತೀರ್ಮಾನಕ್ಕೆ ಬರುತ್ತಾರೆಯೋ ಅದಕ್ಕೆ ನಾವು ಬದ್ಧರಾಗಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಸ್ವಾಮಿ ಮಾನ್ಯ ಸದಸ್ಯರು ಅವರ ಪಾರ್ಟಿಯ ತೀರ್ಮಾನಕ್ಕೆ ಬದ್ಧರಾಗಿದ್ದೇವೆ ಎಂದು ಹೇಳುತ್ತಾರೆ, ಈ ಸದನದಲ್ಲಿ ನಾವೆಲ್ಲರೂ ನಮ್ಮ ಅಭಿಪ್ರಾಯವನ್ನು ಕೊಡುವುದಕ್ಕೆ ಇಲ್ಲಿ ಬಂದಿದ್ದೇವೆ. ಆದ್ದರಿಂದ ಪಾರ್ಟಿಯಲ್ಲಿ ಏನು ತೀರ್ಮಾನವಾಗುತ್ತದೆಯೋ ಅದು ಅಪ್ರಕೃತ. ಪಾರ್ಟಿಯಲ್ಲಿ ಆಗತಕ್ಕಂಥಾದ್ದೇ ಆಖೈರು ತೀರ್ಮಾನವಾಗುತ್ತದೆ, ಈ ಸದನದಲ್ಲಿ ಆಗತಕ್ಕಂಥಾದ್ದು ಆಖೈರು ತೀರ್ಮಾನವಾಗುವುದಿಲ್ಲ ಎನ್ನುವ ಅಭಿಪ್ರಾಯ ಅವರ ಮಾತಿನಿಂದ ಬರುತ್ತಿದೆ. ಆದ್ದರಿಂದ ಈ ಸದನದಲ್ಲಿ ಪ್ರತಿಯೊಬ್ಬರು ತಮ್ಮ ಅಭಿಪ್ರಾಯವನ್ನು ಸೂಚನೆ ಮಾಡುವುದಕ್ಕೆ ಸಂಪೂರ್ಣ ಅಧಿಕಾರ ಇದೆ. ಈ ಸದನದಲ್ಲಿ ಏನು ತೀರ್ಮಾನ ಬರುತ್ತದೆಯೋ ಅದೇ ಆಖೈರು ತೀರ್ಮಾನವಾಗಿ ಉಳಿದುಕೊಳ್ಳುತ್ತದೆ. ಅವರ ಪಾರ್ಟಿಯಲ್ಲಿ ತೀರ್ಮಾನವಾಗತಕ್ಕದ್ದು ನಮಗೆ ಅಪ್ರಕೃತ.

ಶ್ರೀ ಡಿ. ದೇವರಾಜ ಅರಸ್ —ಅನೇಕ ಸಾರಿ ಅವರ ಪಾರ್ಟಿಯಲ್ಲಿ ಏನು ತೀರ್ಮಾನ ಆಗುತ್ತದೆಯೋ ಅದನ್ನೇ ಪಟ್ಟು ಹಿಡಿದು ಕುಳಿತುಕೊಳ್ಳುತ್ತಾರೆ. ಆದ್ದರಿಂದ 165 ಜನ ಇರುವ ಪಾರ್ಟಿಯಲ್ಲಿ ಅದಂತಹ ತೀರ್ಮಾನದ ವಿಷಯದಲ್ಲಿ ಅವರು ಹೇಳುವುದರಲ್ಲಿ ತಪ್ಪು ಏನಿದೆ ?

ಶ್ರೀ ಎಚ್. ಬಿ. ಕೆಂಚೇಗೌಡ.—ನಾನು ನಮ್ಮ ಪಾರ್ಟಿಯ ಕೊನೆಯ ತೀರ್ಮಾನಕ್ಕೆ ಬದ್ಧನಾಗಿದ್ದೇನೆ ಎಂದು ಹೇಳಿದೆ. ಅದಕ್ಕೆ ವಿರೋಧ ಪಕ್ಷದವರು ಬದ್ಧರಾಗಬೇಕು ಎಂದು ಹೇಳಿಲಲ್ಲ. ಇದು ನಮ್ಮ ವೈಯ್ಯಕ್ತಿಕ ವಿಚಾರವಾದರೂ ಸಹ ಭೂಸುಧಾರಣೆಯ ವಿಚಾರದಲ್ಲಿ ನನ್ನ ವೈಯ್ಯಕ್ತಿಕ ವಿಚಾರವನ್ನು ನಾನು ವ್ಯಕ್ತಪಡಿಸುವುದು ಇಷ್ಟೇ, ಎಲ್ಲರೂ ಸಹ ಈಗ ಸಮಾಜವಾದವನ್ನು ಜಾರಿಗೆ ಕೊಡುವುದರಲ್ಲಿ ಬಹಳ ಕಾತುರತೆಯಿಂದ ಉಗ್ರವಾದ ಭಾಷಣವನ್ನು ಮಾಡುತ್ತಿದ್ದಾರೆ. ಎಲ್ಲರೂ ಇದರಲ್ಲಿ ಸಹ ಭಾಷಣ ಮಾಡುವವರು ನಿಜವಾಗಿಯೂ ಸಮಾಜವಾದಿಗಳಾಗಿದ್ದೂ ಪಕ್ಷದಲ್ಲಿ ನಮ್ಮ ದೇಶದಲ್ಲಿ ಸ್ವರ್ಗ ನಿರ್ಮಾಣವಾಗಿ ಬಡವರಿಗೂ ಶ್ರೀಮಂತರಿಗೂ ಅಂತರ ಕಡಮೆ ಆಗುತ್ತಿತ್ತು. ಆದರೆ ಇಲ್ಲಿ ಭಾಷಣ ಮಾಡಿ ಹೋದಮೇಲೆ ಭಾಷಣಕ್ಕೆ ತದ್ವಿರುದ್ಧವಾಗಿ ಆನಂದ ಜೀವನವನ್ನು ನಡೆಸುವುದಕ್ಕೆ ಪ್ರಯತ್ನ ಮಾಡಿದರೆ ಅವರು ಬರೀ ಭಾಷಣಕಾರರಾಗಿ ಉಳಿಯುತ್ತಾರೆಯೇ ಏನಾ ಅವರು ನಿಜವಾದ ಸಮಾಜವಾದಿಗಳಾಗುವುದಿಲ್ಲ ಎಂದು ನಾನು ಹೇಳಬಯಸುತ್ತೇನೆ. ಈಗ ಯಾರು 5 ಎಕರೆ ಸಾಕು, 2 ಎಕರೆ ಸಾಕು ಎಂದು ಹೇಳುತ್ತಿದ್ದಾರೆಯೋ ಅವರು ಎಷ್ಟರಮಟ್ಟಿಗೆ ನಿಷ್ಠೆ, ಪ್ರಾಮಾಣಿಕತೆ ಮತ್ತು ಸತ್ಯಸಂಧತೆಯಿಂದ ಸಮಾಜವಾದವನ್ನು ಜಾರಿಗೆ ತರುವುದಕ್ಕೆ ಬದ್ಧರಾಗಿದ್ದಾರೆ ಎಂಬುದನ್ನು ಅವರು ಅವರ ಎದೆಯನ್ನು ಮುಟ್ಟಿಕೊಂಡು ಹೇಳಲಿ.

ಶ್ರೀ ಕೋಣಂದೂರು ಲಿಂಗಪ್ಪ.—ಸೋಷಲಿಸ್ಟ್ ಪಕ್ಷದವರು 100ಕ್ಕೆ 100 ರಷ್ಟು ಪ್ರಾಮಾಣಿಕರಾಗಿದ್ದೇವೆ.

ಶ್ರೀ ಎಚ್. ಬಿ. ಕೆಂಚೇಗೌಡ.—ಕೊನೆಯವರೆಗೂ ತಾಳ್ಮೆಯಿಂದ ಕುಳಿತುಕೊಂಡರೆ ಒಳ್ಳೆಯದು. ನಾವು ಏನು ಅಭಿಪ್ರಾಯವನ್ನು ಕೊಡುತ್ತೇವೆಯೋ ಅದನ್ನು ತಿಳಿದುಕೊಳ್ಳಬೇಕು. ಅವರು ನಿಜವಾದ ಸೋಷಲಿಸ್ಟ್ ಅಲ್ಲ, ಬರೀ ಮಾತಿನಲ್ಲಿ ಸೋಷಲಿಸ್ಟ್ ಆಗಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ. - ಇದು ನಿಮ್ಮಿಂದ ಸಾಧ್ಯವಿಲ್ಲ. ಮಾನ್ಯ ಸದಸ್ಯರು ನಮ್ಮ ಪ್ರಾಮಾಣಿಕತೆಯನ್ನು ಪ್ರಶ್ನಿಸಿಸುತ್ತಿದ್ದಾರೆ.

ಉಪಾಧ್ಯಕ್ಷರು.—ಯಾರ ಪ್ರಾಮಾಣಿಕತೆಯನ್ನೂ ಪ್ರಶ್ನಿಸುವುದು ಬೇಡ. ತಮ್ಮ ಅಭಿಪ್ರಾಯ ಏನಿದೆ ಅದನ್ನು ಹೇಳಿ.

ಶ್ರೀ ಎಚ್. ಡಿ. ದೇವೇಗೌಡ.—ಸಮಾಜವಾದದ ಬಗ್ಗೆ ಮಾತನಾಡುವವರು ಯಾವ ರೀತಿ ನಡೆದುಕೊಳ್ಳುತ್ತಾರೆ ಎಂಬ ಬಗ್ಗೆ ಅವರು ಹೇಳಿದರು. ಹೇಳಲಿ ಬಿಡಿ.

ಶ್ರೀ ಎಚ್. ಬಿ. ಕೆಂಚೇಗೌಡ.—ಸಮಾಜವಾದದ ಗುರಿಯನ್ನು ಸಾಧಿಸುವುದರಲ್ಲಿ ಎಲ್ಲರ ಅಭಿಪ್ರಾಯವೂ ಒಂದೇ ಆಗಿದೆ. ಅದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಆದರೆ ಈ ಸಮಾಜವಾದದ ಗುರಿಯನ್ನು ಸಾಧಿಸುವಾಗ, ಅದು ಎಲ್ಲ ವರ್ಗದ ಜನರಿಗೂ ಅನ್ವಯವಾಗಬೇಕೇ ಅಥವಾ ಕೆಲವೇ ಜನರಿಗೆ ಅನ್ವಯವಾಗಬೇಕೇ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಇವೊತ್ತು ಪಟ್ಟಣಗಳಲ್ಲಿ ವಾಸ ಮಾಡತಕ್ಕಂಥ ಜನರಿಗೆ ಸಿಗುತ್ತಿರುವ ಸುಖಸವಲತ್ತುಗಳನ್ನು ಮತ್ತು ಹಳ್ಳಿಗಳಲ್ಲಿ ವಾಸ ಮಾಡತಕ್ಕಂಥ ಜನರಿಗೆ ಸಿಗುತ್ತಿರುವ ಸುಖಸವಲತ್ತುಗಳನ್ನು ಹೋಲಿಕೆ ಮಾಡಿ ನೋಡಿದರೆ, ನನ್ನ ಒಂದು ಅನುಭವದ ಪ್ರಕಾರ ರೈತರ ಒಂದು ಆರ್ಥಿಕ ಪರಿಸ್ಥಿತಿ ಆಧೋಗತಿಗೆ ಇಳಿದಿದೆ. ಆದರೂ ಸಹ ಇವೊತ್ತು ಸಮಾಜವಾದದ ಬಗ್ಗೆ ಮಾತನಾಡತಕ್ಕಂಥವರು ಏನು ಹೇಳುತ್ತಿದ್ದಾರೆಂದರೆ, ಐಶ್ವರ್ಯವೆಲ್ಲಾ ಹಳ್ಳಿಯಲ್ಲಿರತಕ್ಕಂಥ ರೈತರಲ್ಲಿಯೇ ಕೇಂದ್ರೀಕೃತವಾಗಿದೆ, ಹಳ್ಳಿಯ ರೈತರೆಲ್ಲಾ ಆಡಂಬರದ ಜೀವನ ನಡೆಸುತ್ತಿದ್ದಾರೆಂದು. ಮತ್ತು ಈ ಒಂದು ಆಡಂಬರದ ಜೀವನವನ್ನು ಬಡವರಿಗೆಲ್ಲಾ ಹಂಚಿಕೆ ಮಾಡಿ, ಬಡತನವನ್ನು ನಿವಾರಣೆ ಮಾಡುತ್ತೇವೆ ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ನಾನು ಪಟ್ಟಣದಲ್ಲಿಯೂ ಕೆಲವಾರು ದಿವಸ ವಾಸ ಮಾಡಿದ್ದೇನೆ. ಹಳ್ಳಿಯಲ್ಲಿಯೂ ಹತ್ತಾರು ವರ್ಷಗಳ ಕಾಲ ವಾಸ ಮಾಡಿದ್ದೇನೆ. ಆ ಒಂದು ಅನುಭವದಿಂದ ಹೇಳಬೇಕೆಂದರೆ, ಹಳ್ಳಿಯ ಜೀವನಕ್ಕೂ ಪಟ್ಟಣದ ಜೀವನಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಪಟ್ಟಣಗಳಲ್ಲಿರತಕ್ಕಂಥ ಕೈಗಾರಿಕೋದ್ಯಮಿಗಳು, ವ್ಯಾಪಾರಸ್ಥರು ಮತ್ತು ಅಧಿಕಾರಿಗಳು ಇಂದು ಉನ್ನತಮಟ್ಟದ ಜೀವನ ನಡೆಸುತ್ತಿದ್ದಾರೆ. ಈ ಒಂದು ಜೀವನ ಮಟ್ಟವನ್ನು ಹಳ್ಳಿಯಲ್ಲಿರುವ ಜನರ ಜೀವನಕ್ಕೆ ಹೋಲಿಕೆ ಮಾಡುವುದು ಯಾವ ರೀತಿಯಿಂದಲೂ ಸಾಧ್ಯವಿಲ್ಲ. ಬೆಂಗಳೂರಿನಲ್ಲಿ ಇಂದು 50-60 ಸಿನಿಮಾ ಮಂದಿರಗಳು ಇವೆ. ದಿನವೂ ಈ ಚಿತ್ರ ಮಂದಿರಗಳಲ್ಲಿ ಮೂರು ನಾಲ್ಕು ಆಟಗಳು ನಡೆಯುತ್ತವೆ. ಅಂದರೆ ಸಿನಿಮಾ ನೋಡುವ ಶಕ್ತಿ ಪಟ್ಟಣದಲ್ಲಿರುವವರಿಗೆ

(ಶ್ರೀ ಹೆಚ್. ಬಿ. ಕೆಂಚೇಗೌಡ)

ಇದೆ. ಆದರೆ ಹಳ್ಳಿಯ ಜನರಿಗೆ ಆ ಶಕ್ತಿಯೂ ಇಲ್ಲ. ಎಷ್ಟು ಜನರಿಗೆ ಇಂದು ವೆಸ್ಟೆಂಡ್ ಹೋಟೆಲ್‌ನಲ್ಲಿ ಮತ್ತು ಅಶೋಕಾ ಹೋಟೆಲ್‌ನಲ್ಲಿ ಇಳಿದುಕೊಳ್ಳುವುದಕ್ಕೆ ಶಕ್ತಿ ಇದೆ, ಎಷ್ಟು ಜನರಿಗೆ ದೊಡ್ಡ ದೊಡ್ಡ ಕಾರಿನಲ್ಲಿ ಓಡಾಡುವುದಕ್ಕೆ ಶಕ್ತಿ ಇದೆ, ಎಷ್ಟು ಜನರಿಗೆ ದೊಡ್ಡ ದೊಡ್ಡ ಬಂಗಲೆಗಳಲ್ಲಿ ವಾಸ ಮಾಡುವುದಕ್ಕೆ ಶಕ್ತಿ ಇದೆ ಎಂದು ನಾನು ಕೇಳುತ್ತಿದ್ದೇನೆ. ಎಷ್ಟು ಜನ ಹಳ್ಳಿಯ ರೈತರಿಗೆ ನುಂದರ ಭಾನಗಳಲ್ಲಿ ವಾಸ ಮಾಡುವುದಕ್ಕೆ ಸಾಧ್ಯವಿದೆ ಎಂದು ಕೇಳುತ್ತೇನೆ. ಇಂದು ಸಮಾಜವಾದವನ್ನು ಹೇಳುವವರು ಮೇರ್ಮೆಟ್ಟದ ಹೇವನವನ್ನು ನಡೆಸುತ್ತಿದ್ದಾರೆ. ಅವರ ಮನೆಯ ಮಟ್ಟಕ್ಕೆ ಮಾತ್ರ ಎಲ್ಲ ರೀತಿಯ ಸೌಕರ್ಯವನ್ನು ಇಟ್ಟುಕೊಂಡಿರುತ್ತಾರೆ. ಪಟ್ಟಣದಲ್ಲಿರುವ ಹೆಂಗಸರಿಗೆ ಇರುವ ಸೌಕರ್ಯಗಳು ಹಳ್ಳಿಯಲ್ಲಿರತಕ್ಕಂಥ ಹೆಂಗಸರಿಗೆ ಇಲ್ಲವಾಗಿದೆ. ಪಟ್ಟಣದಲ್ಲಿರುವವರು ಅಡಿಗೆ ಮಾಡಲು ಅಡಿಗೆಯವರನ್ನು ಇಟ್ಟುಕೊಂಡಿರುತ್ತಾರೆ. ಆದರೆ ಹಳ್ಳಿಯ ರೈತನ ಹೆಂಡತಿ ಅಡಿಗೆ ಮಾಡಲು ಬೆಳಿಗಿನಜಾವ ನಾಲ್ಕು ಗಂಟೆಗೆ ಎದ್ದೇಳಬೇಕು.

Mr. DEPUTY SPEAKER.—How much time does the hon. member require ?

Sri H. B. KENCHE GOWDA.—I want atleast another one hour.

Mr. SPEAKER.—Then he may continue his speech tomorrow. Now we shall take up the next subject *i.e.*, the discussion on a matter of urgent public importance for short duration under rule 51. I call upon the hon. Leader of the Opposition to raise the discussion.

Discussion on a Matter of urgent Public Importance for short duration :

re : Eviction orders of Government on the villagers of Hagedahalli, Channagiri Taluk.

†ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಉಪಾಧ್ಯಕ್ಷರೇ, ಈ ದಿವಸ 59ನೇ ನಿಯಮದ ಮೇರೆಗೆ ಈ ಒಂದು ಪ್ರಾಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಏನು ಒಂದು ಅವಕಾಶ ಕೊಟ್ಟಿದ್ದೀರಿ, ಅದಕ್ಕೆ ಮೊದಲು ನಾನು ತಮಗೆ ಉಪಕೃತನಾಗಿದ್ದೇನೆ. 1961ನೇ ಇನವಿಯಲ್ಲಿ ಚೆನ್ನಗಿರಿ ತಾಲ್ಲೂಕ್, ಕಸಬ ಹೋಬಳಿ, ಹಗೇದಹಳ್ಳಿ ಗ್ರಾಮದಲ್ಲಿ ನುಮಾರು 59 ಜನರಿಗೆ ದರಖಾಸ್ತಿನಲ್ಲಿ 10 ರೂಪಾಯಿಗಳ ಅಪ್‌ಸೆಟ್ ಪ್ರೈಸ್‌ನಲ್ಲಿ ಭೂಮಿಯನ್ನು ಸರ್ಕಾರದವರು ಕೊಟ್ಟಿದ್ದರು. ಈ ನಮಾಜವಾದೀ ಸರ್ಕಾರ ಆತಳಿತಕ್ಕೆ ಬಂದು 9 ತಿಂಗಳಾಯಿತು. ಇವರು ಆಡಳಿತಕ್ಕೆ ಬಂದಮೇಲೆ ಜನರಿಗೆ ಕೊಟ್ಟ ಪ್ರಥಮ ವರಪ್ರಸಾದವೆಂದರೆ ಹಗೇದಹಳ್ಳಿಯ ಹಗರಣ. ಆತಳಿತ ಪಕ್ಷದ ಎರಡು ಗುಂಪುಗಳ ಗುದ್ದಾಟ ಇಲ್ಲಿ ನಡೆದಿದೆ. ಯಾರ ಶಕ್ತಿ ಎಷ್ಟು ಇದೆ ಎಂಬ ಬಗ್ಗೆ ಅಲ್ಲಿ ಗುದ್ದಾಟವಾಗುತ್ತಿದೆ. ದಲಿತವರ್ಗದ ಜನರ ಮೇಲೆ ಅದರಲ್ಲೂ ದಲಿತ ವರ್ಗದ ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ಅತ್ಯಾಚಾರ ನಡೆದಿದೆ.

ಶ್ರೀ ಪಾಟೀಳ್ ನಾಗರಾಜ್:—ಈ ಸರ್ಕಾರದವರ ದೌರ್ಜನ್ಯ ಬರೀ ಹೆಣ್ಣುಮಕ್ಕಳ ಮೇಲೆಯೇ ಆಗುತ್ತಿದೆ ?

ಶ್ರೀ ಎಚ್. ಡಿ. ದೇವೇಗೌಡ.—ಯಾವುದೇ ಒಂದು ಹಾನ್ಯ ಪ್ರವೃತ್ತಿಯಿಂದ ನಾನು ಈ ಮಾತನ್ನು ಹೇಳುತ್ತಿಲ್ಲ. ಮತ್ತು ಆ ರೀತಿ ಹೇಳಿ ಈ ನಭೆಯ ಕಾಲವನ್ನು ಅನಾವಶ್ಯಕವಾಗಿ ತಗೆದುಕೊಳ್ಳಬೇಕೆಂದೂ ನಹ ನಾನು ಇಲ್ಲ. ಯಾರು ಇಪೊತ್ತು ಸರ್ಕಾರದ ಆಶ್ರಯವನ್ನು ಪಡೆಯುವುದಕ್ಕೆ, ಸರ್ಕಾರದ ಬೆಂಬಲವನ್ನು ಪಡೆಯುವುದಕ್ಕೆ ಅನಕ್ತರಾಗಿದ್ದಾರೋ ಅಂತಹವರ ಮೇಲೆ ನಡೆಯುವ ದೌರ್ಜನ್ಯ, ಅತ್ಯಾಚಾರವನ್ನು ಸರ್ಕಾರದ ಗಮನಕ್ಕೆ ತರಬೇಕೆಂಬ ಇಚ್ಛೆ ನನಗಿದೆ. ತಮಗೂ ಕೂಡ ತಂತಿ ಮೂಲಕ ತಮ್ಮಪಕ್ಷದವರು ಆಲ್ಲಿಯ ವಿಷಯವನ್ನು ತಿಳಿಸಿರಬಹುದು. ಆದರೂ